Re. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**( EXTRAORDINARY )**
( ವಿಶೇಷ ಸಂಚಿಕೆ )

| | |
|---|---|
| भाग IX | अनुभाग 1 |
| PART IX | SECTION 1 |
| ಭಾಗ IX | ವಿಭಾಗ 1 |

**प्राधिकार से प्रकाशित**
Published by Authority
**ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.**

| | | | |
|---|---|---|---|
| सं. २ | नई दिल्ली, मंगलवार, जून २१, २०११ | ज्येष्ठ ३१, १९३३ (शाका) | खंड. ४६ |
| No. 2 | New Delhi, Tuesday, June 21, 2011 | Jyeishta 31, 1933 (Saka) | Vol. 46 |
| ಸಂ. ೨ | ನವ ದೆಹಲಿ, ಮಂಗಳವಾರ, ಜೂನ್ ೨೧, ೨೦೧೧ | ಜ್ಯೇಷ್ಠ ೩೧, ೧೯೩೩ (ಶಕ) | ಸಂಪುಟ. ೪೬ |

**Ministry of Law and Justice**

(Legislative Department)

New Delhi, 21st June, 2011

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 21ನೇ ಜೂನ್, 2011**

The Translation in Kannada of the following Acts, namely :- (1) The Atomic Energy Act, 1962 (2) The Insurance Regulatory and Development Authority Act, 1999 - are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

ಈ ಕೆಳಕಂಡ ಅಧಿನಿಯಮಗಳು, ಎಂದರೆ :– (1) ಅಣುಶಕ್ತಿ ಅಧಿನಿಯಮ, 1962 (2) ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999 – ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973ರ 50)ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999

## (1999ರ ಅಧಿನಿಯಮ ಸಂಖ್ಯೆ 41)

[29ನೇ ಡಿಸೆಂಬರ್ 1999]

ವಿಮಾ ಪಾಲಿಸಿಧಾರಕರ ಹಿತಾಸಕ್ತಿಗಳನ್ನು ರಕ್ಷಿಸಲು, ವಿಮಾ ಉದ್ಯಮದ ಕ್ರಮಬದ್ಧ ಬೆಳವಣಿಗೆಯನ್ನು ವಿನಿಯಮಿಸಲು, ಉತ್ತೇಜಿಸಲು ಮತ್ತು ಸುನಿಶ್ಚಿತಪಡಿಸಿಕೊಳ್ಳಲು ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಆನುಷಂಗಿಕವಾದ ವಿಷಯಗಳಿಗಾಗಿ ಮತ್ತು ವಿಮಾ ಅಧಿನಿಯಮ, 1938, ಜೀವ ವಿಮಾ ನಿಗಮ ಅಧಿನಿಯಮ, 1956 ಮತ್ತು ಸಾಮಾನ್ಯ ವಿಮಾ ವ್ಯವಹಾರ (ರಾಷ್ಟ್ರೀಕರಣ) ಅಧಿನಿಯಮ, 1972 ಇವುಗಳನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಪ್ರಾಧಿಕಾರವನ್ನು ಸ್ಥಾಪಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಐವತ್ತನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

### ಅಧ್ಯಾಯ – I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**– (1) ಈ ಅಧಿನಿಯಮವನ್ನು ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು:

ಪರಂತು, ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಈ ಅಧಿನಿಯಮದ ಪ್ರಾರಂಭಕ್ಕೆ ಅಂಥ ಯಾವುದೇ ಉಪಬಂಧದಲ್ಲಿ ಮಾಡಿದ ಯಾವುದೇ ಉಲ್ಲೇಖವನ್ನು ಆ ಉಪಬಂಧವು ಜಾರಿಗೆ ಬರುವುದಕ್ಕಾಗಿ ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

**2. ಪರಿಭಾಷೆಗಳು.**– (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಗೊತ್ತುಪಡಿಸಿದ ದಿನ" ಎಂದರೆ, 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವನ್ನು ಸ್ಥಾಪಿಸಿದ ದಿನಾಂಕ ಎಂದು ಅರ್ಥ;

(ಬಿ) "ಪ್ರಾಧಿಕಾರ" ಎಂದರೆ, 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿಸಲಾದ ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಎಂದು ಅರ್ಥ;

(ಸಿ) "ಅಧ್ಯಕ್ಷ" ಎಂದರೆ, ಪ್ರಾಧಿಕಾರದ ಅಧ್ಯಕ್ಷ ಎಂದು ಅರ್ಥ;

(ಡಿ) "ನಿಧಿ" ಎಂದರೆ, 16ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಚಿಸಿದ ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರದ ನಿಧಿ ಎಂದು ಅರ್ಥ;

(ಇ) "ಮಧ್ಯಕಾಲೀನ ವಿಮಾ ವಿನಿಯಾಮಕ ಪ್ರಾಧಿಕಾರ" ಎಂದರೆ, ಕೇಂದ್ರ ಸರ್ಕಾರವು, ಠರಾವು ಸಂಖ್ಯೆ 17 (2)/ 94 INS-V, ದಿನಾಂಕ 23ನೇ ಜನವರಿ, 1996– ಇದರ ಮೂಲಕ ರಚಿಸಿದ ವಿಮಾ ವಿನಿಯಾಮಕ ಪ್ರಾಧಿಕಾರ ಎಂದು ಅರ್ಥ;

(ಎಫ್)"ಮಧ್ಯವರ್ತಿ ಅಥವಾ ವಿಮಾ ಮಧ್ಯವರ್ತಿ" ಎಂಬುದು ವಿಮಾ ದಳ್ಳಾಳಿಗಳು, ಮರು ವಿಮಾ ದಳ್ಳಾಳಿಗಳು, ವಿಮಾ ಸಮಾಲೋಚಕರು, ಸರ್ವೆಯರುಗಳು ಮತ್ತು ನಷ್ಟ ನಿರ್ಧಾರಕರುಗಳನ್ನು ಒಳಗೊಳ್ಳುತ್ತದೆ;

(ಜಿ) "ಸದಸ್ಯ" ಎಂದರೆ, ಪ್ರಾಧಿಕಾರದ ಪೂರ್ಣಕಾಲಿಕ ಅಥವಾ ಅರೆ ಕಾಲಿಕ ಸದಸ್ಯ ಎಂದು ಅರ್ಥ ಮತ್ತು ಅದು ಅಧ್ಯಕ್ಷನನ್ನು ಒಳಗೊಳ್ಳುತ್ತದೆ;

(ಹೆಚ್)"ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ಎಂದು ಅರ್ಥ;

(ಐ) "ನಿಯಮಿಸಿದ" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ಎಂದು ಅರ್ಥ;

(ಜೆ) "ವಿನಿಯಮನಗಳು" ಎಂದರೆ ಪ್ರಾಧಿಕಾರವು ರಚಿಸಿದ ವಿನಿಯಮನಗಳು.

(2) ಈ ಅಧಿನಿಯಮದಲ್ಲಿ ಬಳಸಿದ ಮತ್ತು ಪರಿಭಾಷಿಸಿಲ್ಲದ, ಆದರೆ, ವಿಮಾ ಅಧಿನಿಯಮ, 1938 (1938ರ 4) ಅಥವಾ ಜೀವ ವಿಮಾ ನಿಗಮ ಅಧಿನಿಯಮ, 1956 (1956ರ 31) ಅಥವಾ ಸಾಮಾನ್ಯ ವಿಮಾ ವ್ಯವಹಾರದ (ರಾಷ್ಟ್ರೀಕರಣ) ಅಧಿನಿಯಮ, 1972 (1972ರ 57) ರಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ – II

## ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ

**3. ಪ್ರಾಧಿಕಾರದ ಸ್ಥಾಪನೆ ಮತ್ತು ನಿಗಮನ.–** (1) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಈ ಅಧಿನಿಯಮದ ಉದ್ದೇಶಗಳಿಗಾಗಿ, "ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ" ಎಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ಸ್ಥಾಪಿಸತಕ್ಕದ್ದು.

(2) ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಸ್ಥಿರ ಮತ್ತು ಚರ ಸ್ವತ್ತುಗಳೆರಡನ್ನೂ ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರದೊಂದಿಗೆ ಶಾಶ್ವತ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಆ ಹೆಸರಿನಿಂದ ಅದು ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.

(3) ಪ್ರಾಧಿಕಾರದ ಮುಖ್ಯ ಕಚೇರಿಯು ಕೇಂದ್ರ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ಸ್ಥಳದಲ್ಲಿ ಇರತಕ್ಕದ್ದು.

(4) ಪ್ರಾಧಿಕಾರವು ಭಾರತದೊಳಗೆ ಯಾವುದೇ ಇತರ ಸ್ಥಳಗಳಲ್ಲಿ ಕಚೇರಿಗಳನ್ನು ಸ್ಥಾಪಿಸಬಹುದು.

**4. ಪ್ರಾಧಿಕಾರದ ರಚನೆ.–** ಪ್ರಾಧಿಕಾರವು ಈ ಕೆಳಕಂಡ ಸದಸ್ಯರನ್ನೊಳಗೊಂಡಿರತಕ್ಕದ್ದು, ಎಂದರೆ:–

ಕೇಂದ್ರ ಸರ್ಕಾರವು, ಜೀವ ವಿಮೆ, ಸಾಮಾನ್ಯ ವಿಮೆ, ವಿಮಾ ವಿಜ್ಞಾನ, ಹಣಕಾಸು, ಅರ್ಥಶಾಸ್ತ್ರ ಕಾನೂನು, ಲೆಕ್ಕಶಾಸ್ತ್ರ, ಆಡಳಿತ ಅಥವಾ ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ಪ್ರಾಧಿಕಾರಕ್ಕೆ ಉಪಯುಕ್ತವಾಗುವಂಥ ಯಾವುದೇ ಇತರ ವಿಷಯಗಳಲ್ಲಿ ಪರಿಣತಿ ಮತ್ತು ಅನುಭವವುಳ್ಳ ದಕ್ಷ, ಪ್ರಾಮಾಣಿಕ ಮತ್ತು ಗಣ್ಯ ವ್ಯಕ್ತಿಗಳೊಳಗಿಂದ ನೇಮಕ ಮಾಡುವಂಥ,–

(ಎ) ಒಬ್ಬ ಅಧ್ಯಕ್ಷ;

(ಬಿ) ಐದಕ್ಕಿಂತ ಹೆಚ್ಚಿರದ ಪೂರ್ಣಕಾಲಿಕ ಸದಸ್ಯರು;

(ಸಿ) ನಾಲ್ಕಕ್ಕಿಂತ ಹೆಚ್ಚಿರದ ಅರೆಕಾಲಿಕ ಸದಸ್ಯರು:

ಪರಂತು, ಅಧ್ಯಕ್ಷ ಮತ್ತು ಪೂರ್ಣಕಾಲಿಕ ಸದಸ್ಯರನ್ನು ನೇಮಕ ಮಾಡುವಾಗ, ಕೇಂದ್ರ ಸರ್ಕಾರವು, ಪ್ರತಿಯೊಂದರಲ್ಲಿ ಕನಿಷ್ಠ ಒಬ್ಬ ವ್ಯಕ್ತಿಯು ಅನುಕ್ರಮವಾಗಿ ಜೀವ ವಿಮೆ, ಸಾಮಾನ್ಯ ವಿಮೆ ಅಥವಾ ವಿಮಾ ವಿಜ್ಞಾನದಲ್ಲಿ ಪರಿಣತಿ ಅಥವಾ ಅನುಭವ ಹೊಂದಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**5. ಅಧ್ಯಕ್ಷ ಮತ್ತು ಇತರ ಸದಸ್ಯರ ಪದಾವಧಿ.**– (1) ಅಧ್ಯಕ್ಷ ಮತ್ತು ಪ್ರತಿಯೊಬ್ಬ ಇತರ ಪೂರ್ಣಕಾಲಿಕ ಸದಸ್ಯನು ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಮರುನೇಮಕಾತಿಗೆ ಅರ್ಹನಾಗಿರತಕ್ಕದ್ದು:

ಪರಂತು, ಯಾರೇ ವ್ಯಕ್ತಿಯು ಅರವತ್ತೈದು ವರ್ಷ ವಯಸ್ಸು ಆದ ನಂತರ ಅಧ್ಯಕ್ಷನಾಗಿ ಪದಧಾರಣ ಮಾಡತಕ್ಕದ್ದಲ್ಲ:

ಮತ್ತೂ ಪರಂತು, ಯಾರೇ ವ್ಯಕ್ತಿಯು ಅರವತ್ತೆರಡು ವರ್ಷ ವಯಸ್ಸು ಆದ ನಂತರ ಪೂರ್ಣಕಾಲಿಕ ಸದಸ್ಯನಾಗಿ ಪದಧಾರಣ ಮಾಡತಕ್ಕದ್ದಲ್ಲ.

(2) ಒಬ್ಬ ಅರೆಕಾಲಿಕ ಸದಸ್ಯನು ತನ್ನ ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳಿಗೆ ಮೀರದಂಥ ಅವಧಿಯವರೆಗೆ ಮಾತ್ರ ಪದಧಾರಣ ಮಾಡತಕ್ಕದ್ದು.

(3) (1)ನೇ ಉಪಪ್ರಕರಣ ಅಥವಾ (2)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಯಾರೇ ಸದಸ್ಯನು,–

(ಎ) ಮೂರು ತಿಂಗಳಿಗಿಂತ ಕಡಿಮೆ ಇಲ್ಲದಂತೆ ಕೇಂದ್ರ ಸರ್ಕಾರಕ್ಕೆ ಲಿಖಿತದಲ್ಲಿ ನೋಟೀಸು ನೀಡುವ ಮೂಲಕ ತನ್ನ ಪದವನ್ನು ತ್ಯಜಿಸಬಹುದು; ಅಥವಾ

(ಬಿ) 6ನೇ ಪ್ರಕರಣದ ಉಪಬಂಧಗಳ ಅನುಸಾರವಾಗಿ ಆತನನ್ನು ಪದದಿಂದ ತೆಗೆದು ಹಾಕಬಹುದು.

**6. ಪದದಿಂದ ತೆಗೆದುಹಾಕುವುದು.**– (1) ಕೇಂದ್ರ ಸರ್ಕಾರವು, ಯಾರೇ ಸದಸ್ಯನನ್ನು, ಅವನು,–

(ಎ) ದಿವಾಳಿ ಎಂದು ನ್ಯಾಯ ನಿರ್ಣೀತನಾಗಿದ್ದರೆ ಅಥವಾ ಯಾವುದೇ ಸಮಯದಲ್ಲಿ ಹಾಗೆಂದು ನ್ಯಾಯ ನಿರ್ಣೀತನಾಗಿದ್ದರೆ; ಅಥವಾ

(ಬಿ) ಸದಸ್ಯನಾಗಿ ಕಾರ್ಯನಿರ್ವಹಿಸಲು ದೈಹಿಕವಾಗಿ ಅಥವಾ ಮಾನಸಿಕವಾಗಿ ಅಸಮರ್ಥನಾಗಿದ್ದರೆ; ಅಥವಾ

(ಸಿ) ಕೇಂದ್ರ ಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃ ಪತನವನ್ನೊಳಗೊಂಡ ಯಾವುದೇ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾದರೆ; ಅಥವಾ

(ಡಿ) ಸದಸ್ಯನಾಗಿ ಅವನ ಪ್ರಕಾರ್ಯಗಳಿಗೆ ಹಾನಿಕಾರಕ ಪರಿಣಾಮ ಬೀರುವ ಸಂಭವವಿರುವಂಥ ಹಣಕಾಸು ಅಥವಾ ಇತರ ಹಿತಾಸಕ್ತಿಯನ್ನು ಆರ್ಜಿಸಿದ್ದರೆ; ಅಥವಾ

(ಇ) ಅವನು ತನ್ನ ಸ್ಥಾನವನ್ನು ಎಷ್ಟರಮಟ್ಟಿಗೆ ದುರುಪಯೋಗಪಡಿಸಿಕೊಂಡಿದ್ದಾನೆಂದರೆ ಅವನನ್ನು ಆ ಸ್ಥಾನದಲ್ಲಿ ಮುಂದುವರೆಸುವುದು ಸಾರ್ವಜನಿಕ ಹಿತಾಸಕ್ತಿಗೆ ಬಾಧಕ ಉಂಟುಮಾಡುವಂತಿದ್ದರೆ

– ಪದದಿಂದ ತೆಗೆದುಹಾಕಬಹುದು.

(2) ಯಾರೇ ಅಂಥ ಸದಸ್ಯನನ್ನು, ಆ ವಿಷಯದಲ್ಲಿ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ಕೊಟ್ಟ ಹೊರತು, ಅವನನ್ನು (1)ನೇ ಉಪಪ್ರಕರಣದ ಖಂಡ (ಡಿ) ಅಥವಾ ಖಂಡ (ಇ) ಮೇರೆಗೆ ತೆಗೆದುಹಾಕತಕ್ಕದ್ದಲ್ಲ.

**7. ಅಧ್ಯಕ್ಷ ಮತ್ತು ಸದಸ್ಯರ ಸಂಬಳ ಮತ್ತು ಭತ್ಯೆಗಳು.**– (1) ಅರೆಕಾಲಿಕ ಸದಸ್ಯರನ್ನು ಹೊರತುಪಡಿಸಿ, ಸದಸ್ಯರಿಗೆ ಸಂದಾಯ ಮಾಡುವ ಸಂಬಳ ಮತ್ತು ಭತ್ಯೆಗಳು, ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

(2) ಅರೆಕಾಲಿಕ ಸದಸ್ಯರು ನಿಯಮಿಸಬಹುದಾದಂಥ ಭತ್ಯೆಗಳನ್ನು ಪಡೆಯತಕ್ಕದ್ದು.

(3) ಸದಸ್ಯನ ಸಂಬಳ, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳನ್ನು ನೇಮಕಾತಿಯ ನಂತರ ಅವನಿಗೆ ಅನನುಕೂಲವಾಗುವ ರೀತಿಯಲ್ಲಿ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

**8. ಸದಸ್ಯರ ಭವಿಷ್ಯದಲ್ಲಿನ ನಿಯೋಜನೆಯ ಮೇಲೆ ಪ್ರತಿಷೇಧ.**– ಅಧ್ಯಕ್ಷ ಮತ್ತು ಪೂರ್ಣಕಾಲಿಕ ಸದಸ್ಯರು, ಅವರು ಅಂಥ ಪದಧಾರಣೆ ಮಾಡುವುದು ಮುಕ್ತಾಯವಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯವರೆಗೆ ಕೇಂದ್ರ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದ ಹೊರತು,–

(ಎ) ಕೇಂದ್ರ ಸರ್ಕಾರದ ಅಡಿಯಲ್ಲಾಗಲಿ ಅಥವಾ ರಾಜ್ಯ ಸರ್ಕಾರದ ಅಡಿಯಲ್ಲಾಗಲಿ ಯಾವುದೇ ನಿಯೋಜನೆಯನ್ನು; ಅಥವಾ

(ಬಿ) ವಿಮಾ ವಲಯದಲ್ಲಿನ ಯಾವುದೇ ಕಂಪನಿಯಲ್ಲಿ ಯಾವುದೇ ನೇಮಕವನ್ನು

– ಅಂಗೀಕರಿಸತಕ್ಕದ್ದಲ್ಲ.

**9. ಅಧ್ಯಕ್ಷರ ಆಡಳಿತಾತ್ಮಕ ಅಧಿಕಾರಗಳು.**– ಅಧ್ಯಕ್ಷರು ಪ್ರಾಧಿಕಾರದ ಎಲ್ಲಾ ಆಡಳಿತಾತ್ಮಕ ವಿಷಯಗಳ ಸಂಬಂಧದಲ್ಲಿ ಸಾಮಾನ್ಯ ಮೇಲ್ವಿಚಾರಣೆ ನಡೆಸುವ ಮತ್ತು ನಿರ್ದೇಶನ ನೀಡುವ ಅಧಿಕಾರಗಳನ್ನು ಹೊಂದಿರತಕ್ಕದ್ದು.

**10. ಪ್ರಾಧಿಕಾರದ ಸಭೆಗಳು.**– (1) ಪ್ರಾಧಿಕಾರವು ವಿನಿಯಮನಗಳ ಮೂಲಕ ನಿರ್ಧರಿಸಬಹುದಾದಂಥ ಸಮಯಗಳಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು ಅದರ ಸಭೆಗಳಲ್ಲಿನ (ಅಂಥ ಸಭೆಗಳಲ್ಲಿನ ಕೋರಂ ಸೇರಿದಂತೆ) ಕಾರ್ಯಕಲಾಪಗಳ ನಿರ್ವಹಣೆಯ ಸಂಬಂಧದಲ್ಲಿ ಅಂಥ ನಿಯಮಗಳನ್ನು ಮತ್ತು ಪ್ರಕ್ರಿಯೆಗಳನ್ನು ಪಾಲಿಸತಕ್ಕದ್ದು.

(2) ಅಧ್ಯಕ್ಷನು, ಅವನು ಯಾವುದೇ ಕಾರಣದಿಂದ ಪ್ರಾಧಿಕಾರದ ಸಭೆಗೆ ಹಾಜರಾಗಲು ಸಾಧ್ಯವಾಗದಿದ್ದರೆ, ಸಭೆಯಲ್ಲಿ ಹಾಜರಿರುವ ಸದಸ್ಯರು ತಮ್ಮೊಳಗಿಂದ ಆಯ್ಕೆ ಮಾಡಿದ ಯಾರೇ ಇತರ ಸದಸ್ಯನು ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(3) ಪ್ರಾಧಿಕಾರದ ಯಾವುದೇ ಸಭೆಯ ಮುಂದೆ ಬರುವ ಎಲ್ಲಾ ಪ್ರಶ್ನೆಗಳನ್ನು ಹಾಜರಿದ್ದು ಮತ್ತು ಮತ ಚಲಾಯಿಸುವ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಮತಗಳು ಸಮವಾಗಿದ್ದ ಸಂದರ್ಭದಲ್ಲಿ, ಅಧ್ಯಕ್ಷನು, ಅಥವಾ ಅವನ ಗೈರು ಹಾಜರಿಯಲ್ಲಿ ಅಧ್ಯಕ್ಷತೆ ವಹಿಸಿದ ವ್ಯಕ್ತಿಯು ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು.

(4) ಪ್ರಾಧಿಕಾರವು ಅದರ ಸಭೆಗಳಲ್ಲಿ ಕಾರ್ಯಕಲಾಪಗಳ ನಿರ್ವಹಣೆಗಾಗಿ ವಿನಿಯಮನಗಳನ್ನು ರಚಿಸಬಹುದು.

**11. ಖಾಲಿಸ್ಥಾನಗಳು, ಮುಂತಾದವು ಪ್ರಾಧಿಕಾರದ ವ್ಯವಹರಣೆಗಳನ್ನು ಅಸಿಂಧುಗೊಳಿಸತಕ್ಕದ್ದಲ್ಲ.**– ಪ್ರಾಧಿಕಾರದ ಯಾವುದೇ ಕಾರ್ಯ ಅಥವಾ ವ್ಯವಹರಣೆಯು,–

(ಎ) ಪ್ರಾಧಿಕಾರದ ಯಾವುದೇ ಖಾಲಿಸ್ಥಾನ ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನತೆ; ಅಥವಾ

(ಬಿ) ಪ್ರಾಧಿಕಾರದ ಸದಸ್ಯನಾಗಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯ ನೇಮಕದಲ್ಲಿನ ಯಾವುದೇ ನ್ಯೂನತೆ; ಅಥವಾ

(ಸಿ) ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದ ಪ್ರಾಧಿಕಾರದ ಪ್ರಕ್ರಿಯೆಯಲ್ಲಿನ ಯಾವುದೇ ಅಕ್ರಮತೆ

– ಇವುಗಳ ಕಾರಣ ಮಾತ್ರದಿಂದಲೇ ಅಸಿಂಧುವಾಗತಕ್ಕದ್ದಲ್ಲ.

**12. ಪ್ರಾಧಿಕಾರದ ಅಧಿಕಾರಿಗಳು ಮತ್ತು ನೌಕರರು.**– (1) ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ಅದರ ಪ್ರಕಾರ್ಯಗಳನ್ನು ಸಮರ್ಥವಾಗಿ ನಿರ್ವಹಿಸಲು ಅದು ಅವಶ್ಯವೆಂದು ಪರಿಗಣಿಸಬಹುದಾದಷ್ಟು ಸಂಖ್ಯೆಯ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ನೇಮಕ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ನೇಮಕ ಮಾಡಿದ ಪ್ರಾಧಿಕಾರದ ಅಧಿಕಾರಿಗಳು ಮತ್ತು ಇತರ ನೌಕರ ಸೇವಾ ನಿಬಂಧನೆಗಳು ಮತ್ತು ಇತರ ಷರತ್ತುಗಳು ಈ ಅಧಿನಿಯಮದ ಮೇರೆಗೆ ರಚಿಸಿದ ವಿನಿಯಮನಗಳ ಮೂಲಕ ನಿಯಂತ್ರಿತವಾಗತಕ್ಕದ್ದು.

## ಅಧ್ಯಾಯ – III

## ಮಧ್ಯಕಾಲೀನ ವಿಮಾ ವಿನಿಯಾಮಕ ಪ್ರಾಧಿಕಾರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳು, ಇತ್ಯಾದಿಗಳ ವರ್ಗಾವಣೆ

**13. ಮಧ್ಯಕಾಲೀನ ವಿಮಾ ವಿನಿಯಾಮಕ ಪ್ರಾಧಿಕಾರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳು, ಇತ್ಯಾದಿಗಳ ವರ್ಗಾವಣೆ.**– ಗೊತ್ತುಪಡಿಸಲಾದ ದಿನದಂದು,–

(ಎ) ಮಧ್ಯಕಾಲೀನ ವಿಮಾ ವಿನಿಯಾಮಕ ಪ್ರಾಧಿಕಾರದ ಎಲ್ಲಾ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಪ್ರಾಧಿಕಾರಕ್ಕೆ ವರ್ಗಾಯಿತವಾಗತಕ್ಕದ್ದು ಮತ್ತು ಅವು ಅದರಲ್ಲಿ ನಿಹಿತಗೊಳ್ಳತಕ್ಕದ್ದು.

**ವಿವರಣೆ.**– ಮಧ್ಯಕಾಲೀನ ವಿಮಾ ವಿನಿಯಾಮಕ ಪ್ರಾಧಿಕಾರದ ಆಸ್ತಿಗಳು, ಎಲ್ಲ ಹಕ್ಕುಗಳು ಮತ್ತು ಅಧಿಕಾರಗಳನ್ನು ಮತ್ತು ವಿಶೇಷವಾಗಿ ನಗದು ಶಿಲ್ಕುಗಳು, ಠೇವಣಿಗಳೂ ಸೇರಿದಂತೆ ಚರಸ್ವತ್ತಾಗಲಿ ಅಥವಾ ಸ್ಥಿರಸ್ವತ್ತಾಗಲಿ ಎಲ್ಲಾ ಸ್ವತ್ತುಗಳನ್ನು ಮತ್ತು ಮಧ್ಯಕಾಲೀನ ವಿಮಾ ವಿನಿಯಾಮಕ ಪ್ರಾಧಿಕಾರದ ವಶದಲ್ಲಿರಬಹುದಾದಂಥ ಸ್ವತ್ತುಗಳಿಂದ ಉದ್ಭವಿಸುವಂಥ ಎಲ್ಲಾ ಇತರೆ ಹಿತಾಸಕ್ತಿಗಳು ಮತ್ತು ಹಕ್ಕುಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟ ಲೆಕ್ಕಪತ್ರಗಳ ಎಲ್ಲ ಪುಸ್ತಕಗಳು ಮತ್ತು ಇತರೆ ದಸ್ತಾವೇಜುಗಳನ್ನು ಒಳಗೊಂಡಿವೆ ಎಂದು ಭಾವಿಸತಕ್ಕದ್ದು; ಮತ್ತು ಹೊಣೆಗಾರಿಕೆಗಳು ಎಲ್ಲಾ ಋಣಗಳನ್ನು, ಹೊಣೆಗಾರಿಕೆಗಳನ್ನು ಮತ್ತು ಯಾವುದೇ ವಿಧದ ಬಾಧ್ಯತೆಗಳನ್ನು ಒಳಗೊಂಡಿವೆ ಎಂದು ಭಾವಿಸತಕ್ಕದ್ದು.

(ಬಿ) (ಎ) ಖಂಡದ ಉಪಬಂಧಗಳಿಗೆ ಬಾಧಕವಾಗದಂತೆ, ಸದರಿ ವಿನಿಯಾಮಕ ಪ್ರಾಧಿಕಾರದ ಉದ್ದೇಶಕ್ಕಾಗಿ ಅಥವಾ ಆ ಸಂಬಂಧದಲ್ಲಿ ಆ ದಿವಸದ ನಿಕಟಪೂರ್ವದಲ್ಲಿ ಮಧ್ಯಕಾಲೀನ ವಿಮಾ ವಿನಿಯಾಮಕ ಪ್ರಾಧಿಕಾರವು, ಪ್ರಾಧಿಕಾರದೊಂದಿಗೆ ಅಥವಾ ಪ್ರಾಧಿಕಾರಕ್ಕಾಗಿ ವಹಿಸಿದ ಎಲ್ಲಾ ಋಣಗಳು, ಬಾಧ್ಯತೆಗಳು ಮತ್ತು ಹೊಣೆಗಾರಿಕೆಗಳು, ಮಾಡಿಕೊಂಡ ಎಲ್ಲಾ ಕರಾರುಗಳು ಮತ್ತು ಮಾಡಲು ತೊಡಗಿದ ಎಲ್ಲಾ ವಿಷಯಗಳನ್ನು ಮತ್ತು ಸಂಗತಿಗಳನ್ನು, ಪ್ರಾಧಿಕಾರವು, ಪ್ರಾಧಿಕಾರದೊಂದಿಗೆ ಅಥವಾ ಪ್ರಾಧಿಕಾರಕ್ಕಾಗಿ, ವಹಿಸಲಾಗಿಯೆಂದು, ಮಾಡಲು ತೊಡಗಿದೆ ಎಂದು ಭಾವಿಸತಕ್ಕದ್ದು;

(ಸಿ) ಆ ದಿನದ ನಿಕಟಪೂರ್ವದಲ್ಲಿ ಮಧ್ಯಕಾಲೀನ ವಿನಿಯಾಮಕ ಪ್ರಾಧಿಕಾರಕ್ಕೆ ಬರಬೇಕಾದ ಎಲ್ಲ ಹಣದ ಮೊತ್ತಗಳನ್ನು ಪ್ರಾಧಿಕಾರಕ್ಕೆ ಬರಬೇಕಾದ ಬಾಕಿ ಎಂಬುದಾಗಿ ಭಾವಿಸತಕ್ಕದ್ದು; ಮತ್ತು

(ಡಿ) ಆ ದಿನದ ನಿಕಟಪೂರ್ವದಲ್ಲಿ ಮಧ್ಯಕಾಲೀನ ವಿಮಾ ವಿನಿಯಾಮಕ ಪ್ರಾಧಿಕಾರದ ಮೂಲಕ ಅಥವಾ ಅದರ ವಿರುದ್ಧ ಹೂಡಿದ ಅಥವಾ ಹೂಡಬಹುದಾಗಿದ್ದ ಎಲ್ಲ ದಾವೆಗಳು ಮತ್ತು ಇತರೆ ಕಾನೂನು ವ್ಯವಹರಣೆಗಳು ಪ್ರಾಧಿಕಾರದ ಮೂಲಕ ಅಥವಾ ಅದರ ವಿರುದ್ಧ ಮುಂದುವರೆಯಬಹುದು ಅಥವಾ ಹೂಡಬಹುದು.

## ಅಧ್ಯಾಯ – IV

## ಪ್ರಾಧಿಕಾರದ ಕರ್ತವ್ಯಗಳು, ಅಧಿಕಾರಗಳು ಮತ್ತು ಪ್ರಕಾರ್ಯಗಳು

**14. ಪ್ರಾಧಿಕಾರದ ಕರ್ತವ್ಯಗಳು, ಅಧಿಕಾರಗಳು ಮತ್ತು ಪ್ರಕಾರ್ಯಗಳು.**– (1) ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿಗೊಳಪಟ್ಟು, ಪ್ರಾಧಿಕಾರವು ವಿಮಾ ವ್ಯವಹಾರದ ಮತ್ತು ಮರು ವಿಮಾ ವ್ಯವಹಾರವನ್ನು ವಿನಿಯಮಿಸುವ, ಉತ್ತೇಜಿಸುವ ಮತ್ತು ಕ್ರಮಬದ್ಧ ಬೆಳವಣಿಗೆಯನ್ನು ಸುನಿಶ್ಚಿತಗೊಳಿಸುವ ಕರ್ತವ್ಯವನ್ನು ಹೊಂದಿರತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಪ್ರಾಧಿಕಾರದ ಅಧಿಕಾರಗಳು ಮತ್ತು ಪ್ರಕಾರ್ಯಗಳು,–

(ಎ) ಅರ್ಜಿದಾರನಿಗೆ ನೋಂದಣಿ ಪ್ರಮಾಣ ಪತ್ರವನ್ನು ನೀಡುವುದು, ನವೀಕರಿಸುವುದು, ಮಾರ್ಪಾಟುಗೊಳಿಸುವುದು, ಹಿಂತೆಗೆದುಕೊಳ್ಳುವುದು, ಪಡೆಯುವುದು, ಅಮಾನತುಗೊಳಿಸುವುದು ಅಥವಾ ಅಂಥ ನೋಂದಣಿಯನ್ನು ರದ್ದು ಮಾಡುವುದು;

(ಬಿ) ಪಾಲಿಸಿಯನ್ನು ಹಸ್ತಾಂತರಿಸುವ, ವಿಮಾಪಾಲಿಸಿಧಾರಕರ ನಾಮನಿರ್ದೇಶನ, ವಿಮೆ ಮಾಡಬಹುದಾದ ಹಿತಾಸಕ್ತಿ, ವಿಮಾ ಕ್ಲೇಮುಗಳ ಇತ್ಯರ್ಥ, ವಿಮೆಯನ್ನು ಬಿಟ್ಟುಕೊಡುವ ಮೌಲ್ಯಗಳು ಮತ್ತು ವಿಮಾ ಕರಾರುಗಳ ಇತರ ನಿಬಂಧನೆ ಮತ್ತು ಷರತ್ತುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ವಿಮಾಪಾಲಿಸಿ ಧಾರಕರ ಹಿತಾಸಕ್ತಿಗಳನ್ನು ರಕ್ಷಿಸುವುದು;

(ಸಿ) ಮಧ್ಯವರ್ತಿ ಅಥವಾ ವಿಮಾ ಮಧ್ಯವರ್ತಿಗಳಿಗೆ ಮತ್ತು ಏಜೆಂಟರುಗಳಿಗೆ ಅಗತ್ಯವಿರುವ ಅರ್ಹತೆಗಳನ್ನು, ನೀತಿ ಸಂಹಿತೆಯನ್ನು ಮತ್ತು ಅವರಿಗೆ ಪ್ರಾಯೋಗಿಕ ತರಬೇತಿಯನ್ನು ನಿರ್ದಿಷ್ಟಪಡಿಸುವುದು;

(ಡಿ) ಸರ್ವೆಯರುಗಳಿಗೆ ಮತ್ತು ನಷ್ಟ ನಿರ್ಧಾರಕರುಗಳಿಗೆ ನೀತಿ ಸಂಹಿತೆಯನ್ನು ನಿರ್ದಿಷ್ಟಪಡಿಸುವುದು;

(ಇ) ವಿಮಾ ವ್ಯವಹಾರವನ್ನು ನಡೆಸುವಲ್ಲಿ ದಕ್ಷತೆಗೆ ಉತ್ತೇಜನ ನೀಡುವುದು;

(ಎಫ್) ವಿಮಾ ಮತ್ತು ಮರು–ವಿಮಾ ವ್ಯವಹಾರದ ಸಂಬಂಧದಲ್ಲಿ ವೃತ್ತೀಯ ಸಂಸ್ಥೆಗಳಿಗೆ ಉತ್ತೇಜನ ನೀಡುವುದು ಮತ್ತು ವಿನಿಯಮಿಸುವುದು;

(ಜಿ) ಈ ಅಧಿನಿಯಮದ ಉದ್ದೇಶಗಳನ್ನು ಪಾಲಿಸುವುದಕ್ಕಾಗಿ ಶುಲ್ಕ ಮತ್ತು ಇತರ ವೆಚ್ಚಗಳನ್ನು ವಿಧಿಸುವುದು;

(ಹೆಚ್) ವಿಮಾಕರ್ತರು, ಮಧ್ಯವರ್ತಿಗಳು, ವಿಮಾ ಮಧ್ಯವರ್ತಿಗಳಿಂದ ಮತ್ತು ವಿಮಾ ವ್ಯವಹಾರಕ್ಕೆ ಸಂಬಂಧಿಸಿದ ಇತರ ಸಂಸ್ಥೆಗಳಿಂದ ಅವುಗಳ ಲೆಕ್ಕ ಪರಿಶೋಧನೆಯೂ ಸೇರಿದಂತೆ ಮಾಹಿತಿಯನ್ನು ತರಿಸಿಕೊಳ್ಳುವುದು; ಪರಿಶೀಲನೆ ನಡೆಸುವುದು, ವಿಚಾರಣೆಗಳನ್ನು ಮತ್ತು ತನಿಖೆಗಳನ್ನು ನಡೆಸುವುದು;

(ಐ) ವಿಮಾ ಅಧಿನಿಯಮ, 1938 (1938ರ 4)ರ 64ಯು ಪ್ರಕರಣದ ಮೇರೆಗೆ ಟ್ಯಾರಿಫ್ ಸಲಹಾ ಸಮಿತಿಯಿಂದ ಹಾಗೆ ನಿಯಂತ್ರಿಸದ ಮತ್ತು ವಿನಿಯಮಿಸದ ಸಾಮಾನ್ಯ ವಿಮಾ ವ್ಯವಹಾರದ ಸಂಬಂಧದಲ್ಲಿ ವಿಮಾಕರ್ತರಿಂದ ಕೊಡ ಮಾಡಬಹುದಾದ ದರಗಳ, ಅನುಕೂಲತೆಗಳ, ನಿಬಂಧನೆಗಳ ಮತ್ತು ಷರತ್ತುಗಳ ನಿಯಂತ್ರಣ ಮತ್ತು ವಿನಿಯಮನಗಳು.

(ಜೆ) ವಿಮಾಕರ್ತರು ಮತ್ತು ಇತರೆ ವಿಮಾ ಮಧ್ಯವರ್ತಿಗಳು ನಿರ್ವಹಿಸತಕ್ಕ ಲೆಕ್ಕಪುಸ್ತಕಗಳ ಮತ್ತು ಲೆಕ್ಕ ಪತ್ರಗಳ ತಃಖ್ತೆಯನ್ನು ಒಪ್ಪಿಸುವ ನಮೂನೆಯನ್ನು ಮತ್ತು ರೀತಿಯನ್ನು ನಿರ್ದಿಷ್ಟಪಡಿಸುವುದು;

(ಕೆ) ವಿಮಾ ಕಂಪನಿಗಳು ನಿಧಿಗಳ ಹೂಡಿಕೆಯನ್ನು ವಿನಿಯಮಿಸುವುದು;

(ಎಲ್) ಧನಾನುಕೂಲತೆಯ ಕನಿಷ್ಠ ಮಿತಿಯ ನಿರ್ವಹಣೆಯನ್ನು ವಿನಿಯಮಿಸುವುದು;

(ಎಂ) ವಿಮಾಕರ್ತರ ಮತ್ತು ಮಧ್ಯವರ್ತಿಗಳ ಅಥವಾ ವಿಮಾ ಮಧ್ಯವರ್ತಿಗಳ ನಡುವಿನ ವಿವಾದಗಳ ನ್ಯಾಯನಿರ್ಣಯ;

(ಎನ್) ಟ್ಯಾರಿಫ್ ಸಲಹಾ ಸಮಿತಿಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ;

(ಓ) ಖಂಡ (ಎಫ್)ನಲ್ಲಿ ಉಲ್ಲೇಖಿಸಲಾದ ವೃತ್ತೀಯ ಸಂಸ್ಥೆಗಳನ್ನು ಉತ್ತೇಜಿಸುವುದಕ್ಕಾಗಿ ಮತ್ತು ವಿನಿಯಮಿಸುವುದಕ್ಕಾಗಿ ಹಣಕಾಸು ಯೋಜನೆಗಳಿಗೆ ವಿಮಾಕರ್ತನ ಪ್ರೀಮಿಯಂ ಆದಾಯದ ಶೇಕಡಾವಾರನ್ನು ನಿರ್ದಿಷ್ಟಪಡಿಸುವುದು;

(ಪಿ) ಗ್ರಾಮೀಣ ಅಥವಾ ಸಾಮಾಜಿಕ ವಲಯದಲ್ಲಿ ವಿಮಾಕರ್ತನು ಕೈಗೊಳ್ಳಬೇಕಾದ ಜೀವ ವಿಮಾ ವ್ಯವಹಾರದ ಮತ್ತು ಸಾಮಾನ್ಯ ವಿಮಾ ವ್ಯವಹಾರದ ಶೇಕಡಾವಾರನ್ನು ನಿರ್ದಿಷ್ಟಪಡಿಸುವುದು; ಮತ್ತು

(ಕ್ಯೂ) ನಿಯಮಿಸಬಹುದಾದಂಥ ಇತರೆ ಅಧಿಕಾರಗಳನ್ನು ಚಲಾಯಿಸುವುದು

– ಇವುಗಳನ್ನು ಒಳಗೊಳ್ಳತಕ್ಕದ್ದು.

## ಅಧ್ಯಾಯ – V

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**15. ಕೇಂದ್ರ ಸರ್ಕಾರದ ಅನುದಾನಗಳು.**– ಕೇಂದ್ರ ಸರ್ಕಾರವು, ಈ ಬಗ್ಗೆ ಕಾನೂನಿನ ಮೂಲಕ ಸಂಸತ್ತು ಮಾಡಿದ ಯುಕ್ತ ವಿನಿಯೋಗದ ತರುವಾಯ, ಈ ಅಧಿನಿಯಮದ ಉದ್ದೇಶಗಳಿಗಾಗಿ ಉಪಯೋಗಿಸಿಕೊಳ್ಳಲು ಸರ್ಕಾರವು ಸೂಕ್ತವೆಂದು ಭಾವಿಸಬಹುದಾದಂಥ ಹಣದ ಮೊತ್ತಗಳ ಅನುದಾನಗಳನ್ನು ಪ್ರಾಧಿಕಾರಕ್ಕೆ ನೀಡಬಹುದು.

**16. ನಿಧಿಯ ರಚನೆ.**– (1) "ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ನಿಧಿ" ಎಂದು ಕರೆಯಲಾಗುವ ಒಂದು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ಅದಕ್ಕೆ,–

(ಎ) ಪ್ರಾಧಿಕಾರವು ಸ್ವೀಕರಿಸಿದ ಎಲ್ಲ ಸರ್ಕಾರಿ ಅನುದಾನಗಳನ್ನು, ಶುಲ್ಕಗಳನ್ನು ಮತ್ತು ಚಾರ್ಜುಗಳನ್ನು;

(ಬಿ) ಕೇಂದ್ರ ಸರ್ಕಾರವು ತೀರ್ಮಾನಿಸಬಹುದಾದಂಥ ಇತರ ಸಂಪನ್ಮೂಲಗಳಿಂದ ಪ್ರಾಧಿಕಾರವು ಸ್ವೀಕರಿಸಿದ ಎಲ್ಲ ಮೊತ್ತಗಳನ್ನು;

(ಸಿ) ವಿಮಾಕರ್ತನಿಂದ ಸ್ವೀಕರಿಸಿದ ನಿಯಮಿಸಲಾದ ಪ್ರೀಮಿಯಂ ಆದಾಯದ ಶೇಕಡ ಪ್ರಮಾಣದ ಮೊತ್ತವನ್ನು

– ಜಮೆ ಮಾಡತಕ್ಕದ್ದು.

(2) ನಿಧಿಯನ್ನು,–

(ಎ) ಪ್ರಾಧಿಕಾರದ ಸದಸ್ಯರ, ಅಧಿಕಾರಿಗಳ ಮತ್ತು ಇತರ ನೌಕರರ ಸಂಬಳವನ್ನು, ಭತ್ಯೆಗಳನ್ನು ಮತ್ತು ಇತರ ಸಂಭಾವನೆಯನ್ನು ನೀಡಲು;

(ಬಿ) ಪ್ರಾಧಿಕಾರವು ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಸಂಬಂಧದಲ್ಲಿ ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಇತರ ವೆಚ್ಚಗಳನ್ನು ಭರಿಸಲು

– ವಿನಿಯೋಗಿಸತಕ್ಕದ್ದು.

**17. ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ.**– (1) ಕೇಂದ್ರ ಸರ್ಕಾರವು ಭಾರತದ ಲೆಕ್ಕ ನಿಯಂತ್ರಕ–ಹಾಗೂ–ಮಹಾಲೆಕ್ಕ ಪರಿಶೋಧಕನೊಂದಿಗೆ ಸಮಾಲೋಚಿಸಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಪ್ರಾಧಿಕಾರವು ಲೆಕ್ಕಪತ್ರಗಳನ್ನು ಮತ್ತು ಸಂಬಂಧಪಟ್ಟ ಇತರ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಮತ್ತು ಲೆಕ್ಕಪತ್ರಗಳ ವಾರ್ಷಿಕ ವಿವರಪತ್ರವನ್ನು ಸಿದ್ಧಪಡಿಸತಕ್ಕದ್ದು.

(2) ಪ್ರಾಧಿಕಾರದ ಲೆಕ್ಕಪತ್ರಗಳನ್ನು ಭಾರತದ ಲೆಕ್ಕ ನಿಯಂತ್ರಕ–ಹಾಗೂ–ಮಹಾ ಲೆಕ್ಕಪರಿಶೋಧಕನು ತಾನು ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಲೆಕ್ಕ ಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ಮಾಡಿದ ಯಾವುದೇ ವೆಚ್ಚವನ್ನು ಪ್ರಾಧಿಕಾರವು ಲೆಕ್ಕ ನಿಯಂತ್ರಕ–ಹಾಗೂ–ಮಹಾ ಲೆಕ್ಕಪರಿಶೋಧಕನಿಗೆ ಸಂದಾಯ ಮಾಡತಕ್ಕದ್ದು.

(3) ಭಾರತದ ಲೆಕ್ಕ ನಿಯಂತ್ರಕ–ಹಾಗೂ–ಮಹಾ ಲೆಕ್ಕಪರಿಶೋಧಕನು ಮತ್ತು ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ಅವನು ನೇಮಕ ಮಾಡಿದ ಯಾವನೇ ಇತರ ವ್ಯಕ್ತಿಯು ಲೆಕ್ಕ ನಿಯಂತ್ರಕ–ಹಾಗೂ–ಮಹಾ ಲೆಕ್ಕ ಪರಿಶೋಧಕನು ಸರ್ಕಾರಿ ಲೆಕ್ಕಪತ್ರಗಳ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ಸಾಮಾನ್ಯವಾಗಿ ಹೊಂದಿರುವಂಥವೇ ಹಕ್ಕುಗಳನ್ನು, ವಿಶೇಷಾಧಿಕಾರಗಳನ್ನು ಮತ್ತು ಅಧಿಕಾರಗಳನ್ನು ಅಂಥ ಲೆಕ್ಕ ಪರಿಶೋಧನೆಗೆ ಸಂಬಂಧಪಟ್ಟಂತೆ ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ ಲೆಕ್ಕ ಪುಸ್ತಕಗಳನ್ನು, ಸಂಬಂಧಿಸಿದ ವೋಚರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಒತ್ತಾಯಿಸುವ ಮತ್ತು ಪ್ರಾಧಿಕಾರದ ಯಾವುದೇ ಕಚೇರಿಯನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕದ್ದು.

(4) ಭಾರತದ ಲೆಕ್ಕ ನಿಯಂತ್ರಕ–ಹಾಗೂ–ಮಹಾ ಲೆಕ್ಕಪರಿಶೋಧಕನು ಅಥವಾ ಈ ಬಗ್ಗೆ ಅವನು ನೇಮಕ ಮಾಡಿದ ಯಾರೇ ಇತರ ವ್ಯಕ್ತಿಯು ಪ್ರಮಾಣೀಕರಿಸಿದ ಪ್ರಾಧಿಕಾರದ ಲೆಕ್ಕಪತ್ರಗಳನ್ನು ಅದರ ಮೇಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ಕೇಂದ್ರ ಸರ್ಕಾರಕ್ಕೆ ಪ್ರತಿವರ್ಷ ಕಳುಹಿಸತಕ್ಕದ್ದು ಮತ್ತು ಆ ಸರ್ಕಾರವು ಅದನ್ನು ಸಂಸತ್ತಿನ ಉಭಯ ಸದನಗಳ ಮುಂದೆ ಇಡುವಂತೆ ಮಾಡತಕ್ಕದ್ದು.

## ಅಧ್ಯಾಯ – VI

## ಸಂಕೀರ್ಣ

**18. ನಿರ್ದೇಶನಗಳನ್ನು ನೀಡಲು ಕೇಂದ್ರ ಸರ್ಕಾರದ ಅಧಿಕಾರ.**– (1) ಈ ಅಧಿನಿಯಮದಲ್ಲಿ ಹಿಂದೆ ಹೇಳಿದ ಉಪಬಂಧಗಳಿಗೆ ಬಾಧಕವಾಗದಂತೆ, ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ಅದರ ಅಧಿಕಾರಗಳನ್ನು ಚಲಾಯಿಸುವಲ್ಲಿ ಅಥವಾ ಅದರ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ, ಕೇಂದ್ರ ಸರ್ಕಾರವು ಕಾಲಕಾಲಕ್ಕೆ ಅದಕ್ಕೆ ಲಿಖಿತದಲ್ಲಿ ನೀಡಬಹುದಾದಂಥ, ತಾಂತ್ರಿಕ ಮತ್ತು ಆಡಳಿತಾತ್ಮಕ ವಿಷಯಗಳ ಸಂಬಂಧದಲ್ಲಿ ಹೊರತು, ಕಾರ್ಯ ನೀತಿಯ ಪ್ರಶ್ನೆಗಳ ಮೇಲಿನ ನಿರ್ದೇಶನಗಳಿಗೆ ಬದ್ಧವಾಗಿರತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗೆ ಯಾವುದೇ ನಿರ್ದೇಶನಗಳನ್ನು ನೀಡುವುದಕ್ಕೆ ಮುಂಚೆ ಪ್ರಾಧಿಕಾರಕ್ಕೆ ಕಾರ್ಯಸಾಧ್ಯವಾಗುವಷ್ಟರ ಮಟ್ಟಿಗೆ ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಒಂದು ಅವಕಾಶವನ್ನು ನೀಡತಕ್ಕದ್ದು.

(2) ಪ್ರಶ್ನೆಯು ಕಾರ್ಯನೀತಿಗೆ ಸಂಬಂಧಿಸಿರಲಿ ಅಥವಾ ಇಲ್ಲದಿರಲಿ ಕೇಂದ್ರ ಸರ್ಕಾರದ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**19. ಪ್ರಾಧಿಕಾರವನ್ನು ರದ್ದುಗೊಳಿಸಲು ಕೇಂದ್ರ ಸರ್ಕಾರದ ಅಧಿಕಾರ.**– (1) ಕೇಂದ್ರ ಸರ್ಕಾರವು ಯಾವುದೇ ಸಮಯದಲ್ಲಿ,–

(ಎ) ಪ್ರಾಧಿಕಾರದ ನಿಯಂತ್ರಣವನ್ನು ಮೀರಿದ ಸನ್ನಿವೇಶಗಳ ಕಾರಣದಿಂದ, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅದಕ್ಕೆ ವಿಧಿಸಿದ ಪ್ರಕಾರ್ಯಗಳನ್ನು ನಿರ್ವಹಿಸಲು ಅಥವಾ ಕರ್ತವ್ಯಗಳನ್ನು ನೇರವೇರಿಸಲು ಅಸಮರ್ಥವಾಗಿದೆ ಎಂದು; ಅಥವಾ

(ಬಿ) ಪ್ರಾಧಿಕಾರವು ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ನೀಡಿದ ಯಾವುದೇ ನಿರ್ದೇಶನವನ್ನು ಪಾಲಿಸಲು ಅಥವಾ ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ವಿಧಿಸಿದ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಅಥವಾ ಕರ್ತವ್ಯಗಳನ್ನು ನೇರವೇರಿಸುವಲ್ಲಿ, ಸತತವಾಗಿ ತಪ್ಪುಮಾಡಿದೆ ಎಂದು ಮತ್ತು ಹಾಗೆ ತಪ್ಪು ಮಾಡಿದ ಪರಿಣಾಮವಾಗಿ ಪ್ರಾಧಿಕಾರದ ಹಣಕಾಸು ಪರಿಸ್ಥಿತಿಗೆ ಅಥವಾ ಆಡಳಿತಕ್ಕೆ ಧಕ್ಕೆಯುಂಟಾಗಿದೆ ಎಂದು; ಅಥವಾ

(ಸಿ) ಸಾರ್ವಜನಿಕ ಹಿತ ದೃಷ್ಟಿಯಿಂದ ಪ್ರಾಧಿಕಾರವನ್ನು ರದ್ದುಗೊಳಿಸುವುದು ಅವಶ್ಯವೆಂಬ ಸನ್ನಿವೇಶವಿದೆ ಎಂದು ಅಭಿಪ್ರಾಯಪಟ್ಟಲ್ಲಿ

– ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಮತ್ತು ಅದರಲ್ಲಿ ಕಾರಣಗಳನ್ನು ನಿರ್ದಿಷ್ಟಪಡಿಸಿ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಆರು ತಿಂಗಳ ಮೀರದ ಅವಧಿಯವರೆಗೆ ಪ್ರಾಧಿಕಾರವನ್ನು ರದ್ದುಗೊಳಿಸಬಹುದು ಮತ್ತು ಈಗಾಗಲೇ ಹಾಗೆ ಮಾಡಿರದಿದ್ದರೆ ವಿಮಾ ಅಧಿನಿಯಮ, 1938 (1938ರ 4)ರ 2ಬಿ ಪ್ರಕರಣದ ಮೇರೆಗೆ ವಿಮಾ ನಿಯಂತ್ರಕನಾಗಿರಲು ಒಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು:

ಪರಂತು, ಅಂಥ ಯಾವುದೇ ಅಧಿಸೂಚನೆಯನ್ನು ಹೊರಡಿಸುವುದಕ್ಕೆ ಮುಂಚೆ, ಕೇಂದ್ರ ಸರ್ಕಾರವು, ಪ್ರಾಧಿಕಾರಕ್ಕೆ ಪ್ರಸ್ತಾವಿತ ರದ್ದಿಯಾತಿಯ ವಿರುದ್ಧ ಮನವಿಗಳನ್ನು ಸಲ್ಲಿಸಲು ಯುಕ್ತ ಅವಕಾಶವನ್ನು ನೀಡತಕ್ಕದ್ದು ಮತ್ತು ಪ್ರಾಧಿಕಾರದ ಮನವಿಗಳು ಏನಾದರೂ ಇದ್ದರೆ, ಅವುಗಳನ್ನು ಪರಿಶೀಲಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವನ್ನು ರದ್ದುಗೊಳಿಸುವ ಅಧಿಸೂಚನೆಯನ್ನು ಪ್ರಕಟಿಸಿದ ನಂತರ,–

(ಎ) ಅಧ್ಯಕ್ಷರು ಮತ್ತು ಇತರೆ ಸದಸ್ಯರು, ರದ್ದಿಯಾತಿಯ ದಿನಾಂಕದಿಂದ ತಮ್ಮ ಅಂಥ ಪದಗಳನ್ನು ತೆರವು ಮಾಡತಕ್ಕದ್ದು;

(ಬಿ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ಪ್ರಾಧಿಕಾರದ ಅಥವಾ ಅದರ ಪರವಾಗಿ ಚಲಾಯಿಸಬಹುದಾದ ಅಥವಾ ನಿರ್ವಹಿಸಬಹುದಾದ ಎಲ್ಲಾ ಅಧಿಕಾರಗಳನ್ನು, ಪ್ರಕಾರ್ಯಗಳನ್ನು ಮತ್ತು ಕರ್ತವ್ಯಗಳನ್ನು (3)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ಪುನರ್‌ರಚನೆಯಾಗುವವರೆಗೆ ವಿಮಾ ನಿಯಂತ್ರಕನು ಚಲಾಯಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು; ಮತ್ತು

(ಸಿ) (3)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ಪುನರ್ ರಚನೆಯಾಗುವವರೆಗೆ ಪ್ರಾಧಿಕಾರದ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಎಲ್ಲ ಸ್ವತ್ತುಗಳು ಕೇಂದ್ರ ಸರ್ಕಾರದಲ್ಲಿ ನಿಹಿತವಾಗಿರತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ರದ್ದಿಯಾತಿಯ ಅವಧಿಯು ಮುಕ್ತಾಯವಾಗುವ ದಿನದಂದು ಅಥವಾ ಅದಕ್ಕೂ ಮುಂಚೆ, ಕೇಂದ್ರ ಸರ್ಕಾರವು, ಹೊಸದಾಗಿ ಅಧ್ಯಕ್ಷನನ್ನು ಮತ್ತು ಇತರ ಸದಸ್ಯರನ್ನು ನೇಮಕ ಮಾಡುವುದರ ಮೂಲಕ ಪ್ರಾಧಿಕಾರವನ್ನು ಪುನರ್ ರಚಿಸತಕ್ಕದ್ದು ಮತ್ತು ಅಂಥ ಸಂದರ್ಭದಲ್ಲಿ (2)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ತನ್ನ ಪದವನ್ನು ತೆರವು ಮಾಡಿದ ಯಾರೇ ವ್ಯಕ್ತಿಯನ್ನು ಪುನರ್ ನೇಮಕಾತಿಗಾಗಿ ಅನರ್ಹನೆಂಬುದಾಗಿ ಭಾವಿಸತಕ್ಕದ್ದಲ್ಲ.

(4) ಕೇಂದ್ರ ಸರ್ಕಾರವು (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಅಧಿಸೂಚನೆಯ ಒಂದು ಪ್ರತಿಯನ್ನು ಮತ್ತು ಈ ಪ್ರಕರಣದ ಮೇರೆಗೆ ತೆಗೆದುಕೊಳ್ಳಲಾದ ಯಾವುದೇ ಕ್ರಮದ ಮತ್ತು ಅಂಥ ಕ್ರಮವನ್ನು ತೆಗೆದುಕೊಳ್ಳಲು ಕಾರಣವಾದ ಸನ್ನಿವೇಶಗಳ ಪೂರ್ಣ ವರದಿಯನ್ನು ಆದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ ಇಡುವಂತೆ ಮಾಡತಕ್ಕದ್ದು.

**20. ಕೇಂದ್ರ ಸರ್ಕಾರಕ್ಕೆ ವಿವರಪಟ್ಟಿಕೆ, ಮುಂತಾದವುಗಳನ್ನು ಒದಗಿಸುವುದು.**– (1) ವಿಮಾ ಉದ್ಯಮದ ಬೆಳವಣಿಗೆ ಮತ್ತು ಪ್ರಗತಿಗಾಗಿ ಯಾವುದೇ ಪ್ರಸ್ತಾವಿತ ಅಥವಾ ಪ್ರಸ್ತುತ ಕಾರ್ಯಕ್ರಮದ ಬಗ್ಗೆ ಒದಗಿಸಬೇಕೆಂದು ಕೇಂದ್ರ ಸರ್ಕಾರವು ನಿರ್ದೇಶಿಸಬಹುದಾದಂಥ ವಿವರಪಟ್ಟಿಕೆಗಳನ್ನು, ವಿವರಪತ್ರಗಳನ್ನು ಮತ್ತು ಇತರ ವಿವರಗಳನ್ನು ಕೇಂದ್ರ ಸರ್ಕಾರವು, ನಿಯಮಿಸಬಹುದಾದಂಥ ಕಾಲದಲ್ಲಿ, ನಮೂನೆಯಲ್ಲಿ ಮತ್ತು ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ಒದಗಿಸತಕ್ಕದ್ದು.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದ ರೀತಿಯಲ್ಲಿ, ಪ್ರಾಧಿಕಾರವು, ಪ್ರತಿ ಹಣಕಾಸು ವರ್ಷವು ಪೂರ್ಣಗೊಂಡ ನಂತರ, ಒಂಬತ್ತು ತಿಂಗಳೊಳಗಾಗಿ, ಹಿಂದಿನ ಹಣಕಾಸು ವರ್ಷದಲ್ಲಿ ವಿಮಾ ವ್ಯವಹಾರದ ಬೆಳವಣಿಗೆ ಮತ್ತು ಪ್ರಗತಿಯ ಕಾರ್ಯಚಟುವಟಿಕೆಗಳೂ ಸೇರಿದಂತೆ ಅದರ ಕಾರ್ಯ ಚಟುವಟಿಕೆಗಳ ನಿಜವಾದ ಮತ್ತು ಪೂರ್ಣವಾದ ವಿವರಣೆಯನ್ನು ನೀಡುವ ಒಂದು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ಸ್ವೀಕರಿಸಿದ ವರದಿಯ ಪ್ರತಿಗಳನ್ನು, ಅವುಗಳನ್ನು ಸ್ವೀಕರಿಸಿದ ನಂತರ ಆದಷ್ಟು ಬೇಗನೆ ಸಂಸತ್ತಿನ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

**21. ಪ್ರಾಧಿಕಾರದ ಅಧ್ಯಕ್ಷ, ಸದಸ್ಯರು, ಅಧಿಕಾರಿಗಳು ಮತ್ತು ಇತರ ನೌಕರರು ಲೋಕ ನೌಕರರಾಗಿರುವುದು.–** ಪ್ರಾಧಿಕಾರದ ಅಧ್ಯಕ್ಷ, ಸದಸ್ಯರು, ಅಧಿಕಾರಿಗಳು ಮತ್ತು ಇತರ ನೌಕರರು ಈ ಅಧಿನಿಯಮದ ಯಾವುದೇ ಉಪಬಂಧಗಳ ಅನುಸಾರವಾಗಿ ಕಾರ್ಯ ನಿರ್ವಹಿಸುತ್ತಿರುವಾಗ ಅಥವಾ ನಿರ್ವಹಿಸುತ್ತಿರುವುದಾಗಿ ತಾತ್ಪರ್ಯವಾದಾಗ ಅವರನ್ನು ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

**22. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.–** ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಅಥವಾ ವಿನಿಯಮನಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಕೇಂದ್ರ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಯಾರೇ ಅಧಿಕಾರಿಯ ಅಥವಾ ಪ್ರಾಧಿಕಾರದ ಯಾರೇ ಸದಸ್ಯನ, ಅಧಿಕಾರಿಯ ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ:

ಪರಂತು, ಈ ಅಧಿನಿಯಮದಲ್ಲಿರುವುದು ಯಾವುದೂ, ಈ ಅಧಿನಿಯಮದ ಮೇರೆಗಲ್ಲದೆ, ಬೇರೆ ರೀತಿಯಿಂದ ಅವನ ವಿರುದ್ಧ ಹೂಡಬಹುದಾದಂಥ ಯಾವುದೇ ದಾವೆ ಅಥವಾ ಇತರ ವ್ಯವಹರಣೆಗಳಿಂದ ಯಾರೇ ವ್ಯಕ್ತಿಗೆ ವಿನಾಯಿತಿ ಕೊಡುವುದಿಲ್ಲ.

**23. ಅಧಿಕಾರಗಳ ಪ್ರತ್ಯಾಯೋಜನೆ.–** (1) ಪ್ರಾಧಿಕಾರವು, ಲಿಖಿತದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳೇನಾದರೂ ಇದ್ದರೆ, ಅವುಗಳಿಗೊಳಪಟ್ಟು, ಪ್ರಾಧಿಕಾರದ ಅಧ್ಯಕ್ಷ ಅಥವಾ ಯಾರೇ ಇತರ ಸದಸ್ಯನಿಗೆ ಅಥವಾ ಅಧಿಕಾರಿಗೆ, ಈ ಅಧಿನಿಯಮದ ಮೇರೆಗೆ ಅದು ಅಗತ್ಯವೆಂದು ಭಾವಿಸಬಹುದಾದಂಥ ಅದರ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಪ್ರತ್ಯಾಯೋಜಿಸಬಹುದು.

(2) ಪ್ರಾಧಿಕಾರವು, ಲಿಖಿತದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಸದಸ್ಯರುಗಳ ಸಮಿತಿಗಳನ್ನು ಸಹ ರಚಿಸಬಹುದು ಮತ್ತು ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ಪ್ರಾಧಿಕಾರದ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಅವುಗಳಿಗೆ ಪ್ರತ್ಯಾಯೋಜಿಸಬಹುದು.

**24. ನಿಯಮಗಳನ್ನು ರಚಿಸಲು ಅಧಿಕಾರ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ, ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:–

(ಎ) 7ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅರೆಕಾಲಿಕ ಸದಸ್ಯರನ್ನು ಹೊರತುಪಡಿಸಿ, ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು;

(ಬಿ) 7ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅರೆಕಾಲಿಕ ಸದಸ್ಯರಿಗೆ ಸಂದಾಯ ಮಾಡಬಹುದಾದ ಭತ್ಯೆಗಳು;

(ಸಿ) 14ನೇ ಪ್ರಕರಣದ (2)ನೇ ಉಪಪ್ರಕರಣದ (ಕ್ಯೂ) ಖಂಡದ ಮೇರೆಗೆ ಪ್ರಾಧಿಕಾರವು ಚಲಾಯಿಸಬಹುದಾದಂಥ ಇತರ ಅಧಿಕಾರಗಳು;

(ಡಿ) 17ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ನಿರ್ವಹಿಸಬೇಕಾದ ವಾರ್ಷಿಕ ಲೆಕ್ಕಪತ್ರಗಳ ನಮೂನೆ;

(ಇ) 20ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ನಮೂನೆ ಮತ್ತು ರೀತಿಯಲ್ಲಿ ಮತ್ತು ಯಾವ ಸಮಯದೊಳಗೆ ವಿವರಣಪಟ್ಟಿಕೆಗಳು ಹಾಗೂ ವಿವರಪತ್ರ ಮತ್ತು ವಿವರಗಳನ್ನು ಕೇಂದ್ರ ಸರ್ಕಾರಕ್ಕೆ ಒದಗಿಸಬೇಕೋ ಆ ನಮೂನೆ ಮತ್ತು ಆ ರೀತಿ ಮತ್ತು ಆ ಕಾಲ;

(ಎಫ್)25ನೇ ಪ್ರಕರಣದ (5)ನೇ ಉಪಪ್ರಕರಣದ ಮೇರೆಗೆ ಯಾವ ವಿಷಯಗಳ ಮೇಲೆ ವಿಮಾ ಸಲಹಾ ಸಮಿತಿಯು ಪ್ರಾಧಿಕಾರಕ್ಕೆ ಸಲಹೆ ನೀಡಬೇಕೋ ಆ ವಿಷಯಗಳು;

(ಜಿ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ, ಅಗತ್ಯಪಡಿಸಿದ ಅಥವಾ ಯಾವ ವಿಷಯಕ್ಕೆ ಸಂಬಂಧಿಸಿದಂತೆ ನಿಯಮಗಳ ಮೂಲಕ ಉಪಬಂಧವನ್ನು ರಚಿಸಬೇಕೋ ಅಥವಾ ರಚಿಸಬಹುದೋ ಆ ಯಾವುದೇ ಇತರ ವಿಷಯ.

**25. ವಿಮಾ ಸಲಹಾ ಸಮಿತಿಯ ಸ್ಥಾಪನೆ.–** (1) ಪ್ರಾಧಿಕಾರವು, ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ವಿಮಾ ಸಲಹಾ ಸಮಿತಿ ಎಂದು ಕರೆಯಲಾಗುವ ಒಂದು ಸಮಿತಿಯನ್ನು ಸ್ಥಾಪಿಸಬಹುದು.

(2) ವಿಮಾ ಸಲಹಾ ಸಮಿತಿಯು, ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ವಾಣಿಜ್ಯ, ಕೈಗಾರಿಕೆ, ಸಾರಿಗೆ, ಕೃಷಿ, ಗ್ರಾಹಕವೇದಿಕೆ, ಸರ್ವೇಯರುಗಳು, ಏಜೆಂಟರುಗಳು, ಮಧ್ಯವರ್ತಿಗಳು, ಸುರಕ್ಷತೆಯಲ್ಲಿ ಮತ್ತು ನಷ್ಟ ತಡೆಗಟ್ಟುವುದರಲ್ಲಿ ನಿರತವಾಗಿರುವ ಸಂಘಸಂಸ್ಥೆಗಳು, ಸಂಶೋಧನಾ ಸಂಸ್ಥೆಗಳು ಮತ್ತು ವಿಮಾ ವಲಯದಲ್ಲಿನ ನೌಕರರ ಸಂಘಗಳ ಹಿತಾಸಕ್ತಿಯನ್ನು ಪ್ರತಿನಿಧಿಸುವ ಇಪ್ಪತ್ತೈದಕ್ಕಿಂತ ಹೆಚ್ಚಿರದ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) ಪ್ರಾಧಿಕಾರದ ಅಧ್ಯಕ್ಷ ಮತ್ತು ಸದಸ್ಯರು ವಿಮಾ ಸಲಹಾ ಸಮಿತಿಯ ಪದನಿಮಿತ್ತ ಅಧ್ಯಕ್ಷ ಮತ್ತು ಪದನಿಮಿತ್ತ ಸದಸ್ಯರಾಗಿರತಕ್ಕದ್ದು.

(4) 26ನೇ ಪ್ರಕರಣದ ಮೇರೆಗೆ ವಿನಿಯಮನಗಳನ್ನು ರಚಿಸುವುಗಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ಪ್ರಾಧಿಕಾರಕ್ಕೆ ಸಲಹೆ ನೀಡುವುದು ವಿಮಾ ಸಲಹಾ ಸಮಿತಿಯ ಉದ್ದೇಶಗಳಾಗಿರತಕ್ಕದ್ದು.

(5) (4)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ವಿಮಾ ಸಲಹಾ ಸಮಿತಿಯು ನಿಯಮಿಸಬಹುದಾದಂಥ ಇತರ ವಿಷಯಗಳ ಮೇಲೆ ಪ್ರಾಧಿಕಾರಕ್ಕೆ ಸಲಹೆ ನೀಡಬಹುದು.

**26. ವಿನಿಯಮನಗಳನ್ನು ರಚಿಸಲು ಅಧಿಕಾರ.–** (1) ಪ್ರಾಧಿಕಾರವು ವಿಮಾ ಸಲಹಾ ಸಮಿತಿಯೊಂದಿಗೆ ಸಮಾಲೋಚಿಸಿ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಸುಸಂಗತವಾದ ವಿನಿಯಮನಗಳನ್ನು ಅಧಿಸೂಚನೆಯ ಮೂಲಕ ರಚಿಸಬಹುದು.

(2) ವಿಶೇಷವಾಗಿ, ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ವಿನಿಯಮನಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:–

(ಎ) ಪ್ರಾಧಿಕಾರವು ಸಭೆ ಸೇರತಕ್ಕ ಕಾಲ ಮತ್ತು ಸ್ಥಳ ಮತ್ತು 10ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಕಾರ್ಯಕಲಾಪಗಳ ನಿರ್ವಹಣೆಗಾಗಿ ಅವಶ್ಯವಿರುವ ಕೋರಂ ಸೇರಿದಂತೆ ಅಂಥ ಸಭೆಗಳಲ್ಲಿ ಅನುಸರಿಸತಕ್ಕ ಪ್ರಕ್ರಿಯೆ;

(ಬಿ) 10ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಅದರ ಸಭೆಗಳಲ್ಲಿ ನಿರ್ವಹಿಸತಕ್ಕ ಕಾರ್ಯಕಲಾಪಗಳು;

(ಸಿ) 12ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರದ ಅಧಿಕಾರಿಗಳ ಮತ್ತು ಇತರ ನೌಕರರ ಸೇವಾ ನಿಬಂಧನೆಗಳು ಮತ್ತು ಇತರ ಷರತ್ತುಗಳು;

(ಡಿ) 23ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸದಸ್ಯರ ಸಮಿತಿಗಳಿಗೆ ಪ್ರತ್ಯಾಯೋಜಿಸಬಹುದಾದ ಅಧಿಕಾರಗಳು ಮತ್ತು ಪ್ರಕಾರ್ಯಗಳು; ಮತ್ತು

(ಇ) ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬೇಕೆಂದು ಅಥವಾ ನಿರ್ದಿಷ್ಟಪಡಿಸ ಬಹುದೆಂದು ಅಗತ್ಯಪಡಿಸಿದ ಅಥವಾ ಯಾವ ವಿಷಯಕ್ಕೆ ಸಂಬಂಧಿಸಿದಂತೆ ವಿನಿಯಮನಗಳ ಮೂಲಕ ಉಪಬಂಧವನ್ನು ರಚಿಸಬೇಕೋ ಅಥವಾ ರಚಿಸಬಹುದೋ ಆ ಯಾವುದೇ ಇತರ ವಿಷಯ.

**27. ನಿಯಮಗಳು ಮತ್ತು ವಿನಿಯಮನಗಳನ್ನು ಸಂಸತ್ತಿನ ಮುಂದೆ ಇಡತಕ್ಕದ್ದು.**– ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಮತ್ತು ವಿನಿಯಮನವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನಕ್ಕೆ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಅಥವಾ ವಿನಿಯಮನದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮತ್ತು ವಿನಿಯಮನವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಅಥವಾ ವಿನಿಯಮನವು, ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು, ಆ ನಿಯಮದ ಅಥವಾ ವಿನಿಯಮನದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟುಮಾಡತಕ್ಕದ್ದಲ್ಲ.

**28. ಇತರ ಕಾನೂನುಗಳ ಅನ್ವಯವು ಪ್ರತಿಷೇಧಿತವಾಗದಿರುವುದು.**– ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಉಪಬಂಧಗಳಿಗೆ ಪೂರಕವಾಗಿರತಕ್ಕದ್ದು ಮತ್ತು ಅವುಗಳನ್ನು ಕುಂಠಿತಗೊಳಿಸತಕ್ಕದ್ದಲ್ಲ.

**29. ತೊಂದರೆಗಳನ್ನು ನಿವಾರಿಸಲು ಅಧಿಕಾರ.**– (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ, ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಕಂಡುಬರಬಹುದಾದಂಥ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಉಪಬಂಧಗಳನ್ನು ರಚಿಸಬಹುದು:

ಪರಂತು, ಗೊತ್ತುಪಡಿಸಿದ ದಿನದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**30. 1938ರ 4ನೇ ಅಧಿನಿಯಮದ ತಿದ್ದುಪಡಿ.**– ವಿಮಾ ಅಧಿನಿಯಮ, 1938 ಇದನ್ನು ಈ ಅಧಿನಿಯಮದ ಮೊದಲನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ತಿದ್ದುಪಡಿ ಮಾಡತಕ್ಕದ್ದು.

**31. 1956ರ 31ನೇ ಅಧಿನಿಯಮದ ತಿದ್ದುಪಡಿ.**– ಜೀವ ವಿಮಾ ನಿಗಮ ಅಧಿನಿಯಮ, 1956 ಇದನ್ನು ಈ ಅಧಿನಿಯಮದ ಎರಡನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ತಿದ್ದುಪಡಿ ಮಾಡತಕ್ಕದ್ದು.

**32. 1972ರ 57ನೇ ಅಧಿನಿಯಮದ ತಿದ್ದುಪಡಿ.**– ಸಾಮಾನ್ಯ ವಿಮಾ ವ್ಯವಹಾರದ (ರಾಷ್ಟ್ರೀಕರಣ) ಅಧಿನಿಯಮ, 1972 ಇದನ್ನು ಈ ಅಧಿನಿಯಮದ ಮೂರನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ತಿದ್ದುಪಡಿ ಮಾಡತಕ್ಕದ್ದು.

## ಮೊದಲನೆಯ ಅನುಸೂಚಿ

### (30ನೇ ಪ್ರಕರಣ ನೋಡಿ)

### ವಿಮಾ ಅಧಿನಿಯಮ, 1938ಕ್ಕೆ ತಿದ್ದುಪಡಿ

### (1938ರ 4)

1. ಈ ಅಧಿನಿಯಮದಲ್ಲಿ, 2ನೇ ಪ್ರಕರಣದ (5ಬಿ) ಖಂಡದಲ್ಲಿರುವುದನ್ನು ಮತ್ತು 2ಬಿ ಪ್ರಕರಣದಲ್ಲಿರುವುದನ್ನು ಹೊರತುಪಡಿಸಿ, "ನಿಯಂತ್ರಕ" ಎಂಬ ಪದ ಬರುವ ಕಡೆಯಲ್ಲೆಲ್ಲಾ ಅವುಗಳಿಗೆ ಬದಲಾಗಿ "ಪ್ರಾಧಿಕಾರ" ಎಂಬ ಪದವನ್ನು ಸೇರಿಸತಕ್ಕದ್ದು ಮತ್ತು ವ್ಯಾಕರಣದ ನಿಯಮಗಳು ಅಗತ್ಯಪಡಿಸಬಹುದಾದಂತೆ ಅಂಥ ತತ್ಪರಿಣಾಮವಾದ ಬದಲಾವಣೆಗಳನ್ನು ಸಹ ಮಾಡಬಹುದು.

2. 27, 27ಎ, 27ಬಿ, 31, 32ಎ, 40ಎ, 48ಬಿ, 64ಎಫ್, 64ಜಿ, 64ಐ, 64ಜೆ, 64ಎಲ್, 64ಆರ್, 64ಯುಸಿ, 64ಯುಎಂ, 113 ಮತ್ತು 115ನೇ ಪ್ರಕರಣಗಳಲ್ಲಿ "ಕೇಂದ್ರ ಸರ್ಕಾರ" ಎಂಬ ಪದವು ಬರುವ ಕಡೆಯಲ್ಲೆಲ್ಲಾ "ಪ್ರಾಧಿಕಾರ" ಎಂಬ ಪದವನ್ನು ಪ್ರತ್ಯಾಯೋಜಿಸತಕ್ಕದ್ದು.

3. 2ನೇ ಪ್ರಕರಣ,–

(ಎ) (1)ನೇ ಖಂಡದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:–

'(1ಎ) "ಪ್ರಾಧಿಕಾರ" ಎಂದರೆ ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಸ್ಥಾಪಿಸಲಾದ ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಎಂದು ಅರ್ಥ';

(ಬಿ) (5ಬಿ) ಖಂಡಕ್ಕೆ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು:–

'(5ಬಿ) "ವಿಮಾ ನಿಯಂತ್ರಕ" ಎಂದರೆ ಈ ಅಧಿನಿಯಮ ಅಥವಾ ಜೀವ ವಿಮಾ ನಿಗಮ ಅಧಿನಿಯಮ, 1956 (1956ರ 31) ಅಥವಾ ಸಾಮಾನ್ಯ ವಿಮಾ ವ್ಯವಹಾರದ (ರಾಷ್ಟ್ರೀಕರಣ) ಅಧಿನಿಯಮ, 1972 (1972ರ 57) ಅಥವಾ ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಮೇರೆಗೆ ಪ್ರಾಧಿಕಾರದ ಎಲ್ಲಾ ಅಧಿಕಾರಗಳನ್ನು ಚಲಾಯಿಸಲು, ಪ್ರಕಾರ್ಯಗಳನ್ನು ನಿರ್ವಹಿಸಲು ಮತ್ತು ಕರ್ತವ್ಯಗಳನ್ನು ನೆರವೇರಿಸಲು 2ಬಿ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ನೇಮಕ ಮಾಡಿದ ಅಧಿಕಾರಿ';

(ಸಿ) (7)ನೇ ಖಂಡದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:–

'(7ಎ) "ಭಾರತೀಯ ವಿಮಾ ಕಂಪನಿ" ಎಂದರೆ,–

(ಎ) ಕಂಪನಿಗಳ ಅಧಿನಿಯಮ, 1956ರ ಮೇರೆಗೆ ರಚಿಸಿದ ಮತ್ತು ನೋಂದಾಯಿಸಿದ;

(ಬಿ) ವಿದೇಶಿ ಕಂಪನಿಯು, ಅದರ ಮೂಲಕವಾಗಲಿ ಅಥವಾ ಅದರ ಸಹಾಯಕ ಕಂಪನಿಗಳ ಮೂಲಕವಾಗಲಿ ಅಥವಾ ಅದರ ನಾಮ ನಿರ್ದೇಶಿತರ ಮೂಲಕವಾಗಲಿ ಅಂಥ ಭಾರತೀಯ ವಿಮಾ ಕಂಪನಿಯ ಸಂದಾಯಿತ ಈಕ್ವಿಟಿ ಬಂಡವಾಳದ ಶೇಕಡ ಇಪ್ಪತ್ತಾರನ್ನು ಮೀರದಂತೆ ಒಟ್ಟು ಈಕ್ವಿಟಿ ಷೇರುಗಳನ್ನು ಹೊಂದಿದ;

(ಸಿ) ಜೀವ ವಿಮಾ ವ್ಯವಹಾರ ಅಥವಾ ಸಾಮಾನ್ಯ ವಿಮಾ ವ್ಯವಹಾರ ಅಥವಾ ಪುನರ್ ವಿಮಾ ವ್ಯವಹಾರವನ್ನು ನಡೆಸುವುದೇ ಏಕಮಾತ್ರ ಉದ್ದೇಶವಾಗಿರುವ

– ಕಂಪನಿಯಾಗಿರುವ ಯಾವುದೇ ವಿಮಾಕರ್ತ ಎಂದು ಅರ್ಥ.

**ವಿವರಣೆ:**– ಈ ಖಂಡದ ಉದ್ದೇಶಗಳಿಗಾಗಿ, "ವಿದೇಶಿ ಕಂಪನಿ" ಎಂಬ ಪದಾವಳಿಯು ಆದಾಯ ತೆರಿಗೆ ಅಧಿನಿಯಮ, 1961ರ (1961ರ 43) 2ನೇ ಪ್ರಕರಣದ (23ಎ) ಖಂಡದ ಮೇರೆಗೆ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು';

(ಡಿ) (14)ನೇ ಖಂಡದಲ್ಲಿ, "114ನೇ ಪ್ರಕರಣ" ಎಂಬುದಕ್ಕೆ ಬದಲಾಗಿ "ಈ ಅಧಿನಿಯಮ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

4. 2ನೇ ಪ್ರಕರಣದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:–

"**2ಎ. ಕೆಲವು ಪದಗಳ ಮತ್ತು ಪದಾವಳಿಗಳ ಅರ್ಥ ವಿವರಣೆ.**– ಈ ಅಧಿನಿಯಮದಲ್ಲಿ ಬಳಸಿರುವ ಮತ್ತು ಪರಿಭಾಷಿಸಿರದ ಆದರೆ ಜೀವ ವಿಮಾ ನಿಗಮ ಅಧಿನಿಯಮ, 1956 (1956ರ 31), ಸಾಮಾನ್ಯ ವಿಮಾ ವ್ಯವಹಾರದ (ರಾಷ್ಟ್ರೀಕರಣ) ಅಧಿನಿಯಮ, 1972 (1972ರ 57)ರ ಮತ್ತು ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999 ಇವುಗಳಲ್ಲಿ ಪರಿಭಾಷಿಸಿದ ಪದಗಳು ಮತ್ತು ಪದಾವಳಿಗಳು ಆ ಅಧಿನಿಯಮಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು".

5. 2ಬಿ ಪ್ರಕರಣದ, (1)ನೇ ಉಪಪ್ರಕರಣಕ್ಕೆ ಬದಲಾಗಿ, ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು:–

"(1) ಯಾವುದೇ ಕಾಲದಲ್ಲಿ, ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ 19ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವನ್ನು ರದ್ದುಪಡಿಸಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಆ ಅಧಿನಿಯಮದ 19ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಪ್ರಾಧಿಕಾರವು ಪುನರ್‌ರಚನೆಯಾಗುವ ಕಾಲದವರೆಗೆ ವಿಮಾ ನಿಯಂತ್ರಕನಾಗಿರಲು ಒಬ್ಬ ವ್ಯಕ್ತಿಯನ್ನು ನೇಮಕ ಮಾಡಬಹುದು".

6. 2ಸಿ ಪ್ರಕರಣದ (1)ನೇ ಉಪಪ್ರಕರಣದಲ್ಲಿ, ಎರಡನೆಯ ಪರಂತುಕದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:–

"ಪರಂತು ಅದೂ ಅಲ್ಲದೆ, ಭಾರತೀಯ ವಿಮಾ ಕಂಪನಿಯನ್ನು ಹೊರತುಪಡಿಸಿ ಯಾರೇ ವಿಮಾಕರ್ತನು ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದಂದು ಅಥವಾ ಆ ತರುವಾಯ ಈ ಅಧಿನಿಯಮದ ಮೇರೆಗೆ ಭಾರತದಲ್ಲಿ ಯಾವುದೇ ವರ್ಗದ ವಿಮಾ ವ್ಯವಹಾರವನ್ನು ನಡೆಸಲು ಪ್ರಾರಂಭಿಸತಕ್ಕದ್ದಲ್ಲ".

7. 3ನೇ ಪ್ರಕರಣದ,–

(ಎ) (1)ನೇ ಉಪಪ್ರಕರಣದಲ್ಲಿ ಮೊದಲನೆಯ ಪರಂತುಕದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:–

"ಮತ್ತೂ ಪರಂತು, ಸಂದರ್ಭಾನುಸಾರ ಒಬ್ಬ ವ್ಯಕ್ತಿಯು ಅಥವಾ ವಿಮಾಕರ್ತನು, ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದಂದು ಅಥವಾ ಅದಕ್ಕೂ ಮುಂಚೆ, ಅಂಥ ಪ್ರಾರಂಭಕ್ಕೆ ಮುಂಚೆ ನೋಂದಣಿ ಪ್ರಮಾಣಪತ್ರದ ಅವಶ್ಯಕತೆ ಇಲ್ಲದ ಯಾವುದೇ ವರ್ಗದ ವಿಮಾ ವ್ಯವಹಾರವನ್ನು ಭಾರತದಲ್ಲಿ ನಡೆಸುತ್ತಿದ್ದರೆ, ಅಂಥ ಪ್ರಾರಂಭದಿಂದ ಮೂರು ತಿಂಗಳ ಅವಧಿಯವರೆಗೆ ಅಥವಾ ಮೂರು ತಿಂಗಳ ಸದರಿ ಅವಧಿಯೊಳಗಾಗಿ ಅಂಥ ನೋಂದಣಿಗಾಗಿ ಅವನು ಅರ್ಜಿಯನ್ನು ಸಲ್ಲಿಸಿದ್ದರೆ ಅಂಥ ಅರ್ಜಿಯು ವಿಲೆ ಆಗುವವರೆಗೆ ಅಂಥ ವ್ಯವಹಾರವನ್ನು ಮುಂದುವರೆಸಬಹುದು:

ಪರಂತು ಅದೂ ಅಲ್ಲದೆ, ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದ ನಿಕಟಪೂರ್ವದಲ್ಲಿ ಪಡೆದಂಥ ಯಾವುದೇ ನೋಂದಣಿ ಪ್ರಮಾಣಪತ್ರವನ್ನು ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಪ್ರಾಧಿಕಾರದಿಂದ ಪಡೆಯಲಾದುದು ಎಂದು ಭಾವಿಸತಕ್ಕದ್ದು";

(ಬಿ) (2)ನೇ ಉಪ ಪ್ರಕರಣದಲ್ಲಿ,–

(i) ಪ್ರಾರಂಭದ ಭಾಗದಲ್ಲಿ "ನೋಂದಣಿಗಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿ ಜೊತೆಗೆ . . . . . . . . ಇರತಕ್ಕದ್ದು" – ಎಂಬುದರ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು:–

"ನೋಂದಣಿಗಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿಯನ್ನು ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ಧರಿಸಬಹುದಾದಂಥ ರೀತಿಯಲ್ಲಿ ಸಲ್ಲಿಸತಕ್ಕದ್ದು ಮತ್ತು ಅದರ ಜೊತೆಗೆ ........................ ಇರತಕ್ಕದ್ದು";

(ii) (ಡಿ) ಖಂಡದಲ್ಲಿ "ದುಡಿಯುವ ಬಂಡವಾಳ" ಎಂಬುದಕ್ಕೆ ಬದಲಾಗಿ "ಸಂದಾಯಿತ ಈಕ್ವಿಟಿ ಬಂಡವಾಳ ಅಥವಾ ದುಡಿಯುವ ಬಂಡವಾಳ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(iii) (ಎಫ್) ಖಂಡದ ಪರಂತುಕದ ಕೊನೆಯಲ್ಲಿ ಬರುವ "ಮತ್ತು" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;

(iv) (ಜಿ) ಖಂಡಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು:-

"(ಜಿ) ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂತೆ ವ್ಯವಹಾರದ ಪ್ರತಿಯೊಂದು ವರ್ಗಕ್ಕಾಗಿ ಐವತ್ತು ಸಾವಿರ ರೂಪಾಯಿಗಳನ್ನು ಮೀರದಂತೆ ವಿನಿಯಮನಗಳ ಮೂಲಕ ನಿರ್ಧರಿಸಬಹುದಾದಂಥ ಫೀಜಿನ ಸಂದಾಯವನ್ನು ತೋರಿಸುವ ರಸೀದಿ;

(ಹೆಚ್)ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ದಸ್ತಾವೇಜುಗಳು;";

(ಸಿ) (2ಎ) ಉಪಪ್ರಕರಣದ ನಂತರ,-

"(2ಎಎ) ಪ್ರಾಧಿಕಾರವು ನೋಂದಾಯಿಸಲು ಅರ್ಜಿದಾರನಿಗೆ ಆದ್ಯತೆಯನ್ನು ನೀಡತಕ್ಕದ್ದು ಮತ್ತು ಅಂಥ ಅರ್ಜಿದಾರನು ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ನಮೂನೆಯಲ್ಲಿ ಮತ್ತು ರೀತಿಯಲ್ಲಿ ವ್ಯಕ್ತಿಗಳಿಗೆ ಅಥವಾ ವ್ಯಕ್ತಿಗಳ ಸಮೂಹಕ್ಕೆ ಆರೋಗ್ಯ ರಕ್ಷಣೆಯನ್ನು ಒದಗಿಸುವುದಕ್ಕಾಗಿ ಜೀವ ವಿಮಾ ವ್ಯವಹಾರವನ್ನು ಅಥವಾ ಸಾಮಾನ್ಯ ವಿಮಾ ವ್ಯವಹಾರವನ್ನು ನಡೆಸುವುದಕ್ಕೆ ಒಪ್ಪಿದರೆ ನೋಂದಣಿಯ ಪ್ರಮಾಣಪತ್ರವನ್ನು ಮಂಜೂರು ಮಾಡತಕ್ಕದ್ದು.";

– ಎಂಬುದನ್ನು ಸೇರಿಸತಕ್ಕದ್ದು.

(ಡಿ) (4)ನೇ ಉಪಪ್ರಕರಣದಲ್ಲಿ,-

(i) (ಎಫ್) ಖಂಡದಲ್ಲಿ "ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಆದೇಶದ, ಅಥವಾ" ಎಂಬುದಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು:-

"ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಯಾವುದೇ ವಿನಿಯಮನದ ಅಥವಾ ಆದೇಶದ ಅಥವಾ ನೀಡಲಾದ ಯಾವುದೇ ನಿರ್ದೇಶನದ, ಅಥವಾ";

(ii) (ಹೆಚ್) ಖಂಡದಲ್ಲಿ, "ಅಥವಾ" ಎಂಬುದನ್ನು ಕೊನೆಯಲ್ಲಿ ಸೇರಿಸತಕ್ಕದ್ದು;

(iii) (ಹೆಚ್) ಖಂಡದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:-

"(ಐ) ವಿಮಾಕರ್ತನು, ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಮೇರೆಗೆ ಪ್ರಾಧಿಕಾರವು ಸಂದರ್ಭಾನುಸಾರ ನೀಡಿದ ಯಾವುದೇ ನಿರ್ದೇಶನ ಅಥವಾ ಮಾಡಿದ ಯಾವುದೇ ಆದೇಶವನ್ನು ಪಾಲಿಸುವಲ್ಲಿ ತಪ್ಪಿದರೆ; ಅಥವಾ

(ಜೆ) ವಿಮಾ ಕರ್ತನು, ಕಂಪನಿಗಳ ಅಧಿನಿಯಮ, 1956 (1956ರ 1)ರ ಅಥವಾ ಜೀವ ವಿಮಾ ನಿಗಮ ಅಧಿನಿಯಮ, 1956 (1956ರ 31)ರ ಅಥವಾ ಸಾಮಾನ್ಯ ವಿಮಾ ವ್ಯವಹಾರದ (ರಾಷ್ಟ್ರೀಕರಣ) ಅಧಿನಿಯಮ, 1972 (1972ರ 57)ರ ಅಥವಾ ವಿದೇಶಿ ವಿನಿಮಯ ವಿನಿಯಾಮಕ ಅಧಿನಿಯಮ, 1973 (1973ರ 46)ರ ಯಾವುದೇ ಅಗತ್ಯತೆಯನ್ನು ಪಾಲಿಸಲು ತಪ್ಪಿದರೆ ಅಥವಾ ಅವುಗಳನ್ನು ಉಲ್ಲಂಘಿಸಿ ಯಾವುದೇ ಕಾರ್ಯ ಮಾಡಿದರೆ.";

(ಇ) (5ಸಿ) ಉಪಪ್ರಕರಣದಲ್ಲಿ,–

(i) "ಖಂಡ (ಹೆಚ್)" ಬದಲಾಗಿ "ಖಂಡ (ಹೆಚ್) ಅಥವಾ ಖಂಡ (ಐ) ಅಥವಾ ಖಂಡ (ಜೆ)" ಇವುಗಳನ್ನು ಸೇರಿಸತಕ್ಕದ್ದು;

(ii) "ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಮಾಡಿದ ಆದೇಶದ ಯಾವುದೇ ಅಗತ್ಯತೆ" ಇವುಗಳ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು:–

"ಈ ಅಧಿನಿಯಮದ ಅಥವಾ ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಅಥವಾ ಯಾವುದೇ ವಿನಿಯಮನದ ಅಥವಾ ಮಾಡಿದ ಯಾವುದೇ ಆದೇಶದ ಅಥವಾ ಆ ಅಧಿನಿಯಮಗಳ ಮೇರೆಗೆ ನೀಡಿದ ಯಾವುದೇ ನಿರ್ದೇಶನದ ಯಾವುದೇ ಅಗತ್ಯತೆ";

(ಎಫ್)(5ಡಿ) ಉಪಪ್ರಕರಣದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:–

"(5ಇ) ಪ್ರಾಧಿಕಾರವು, ತಾನು ರಚಿಸಿದ ವಿನಿಯಮನಗಳ ಮೂಲಕ ನಿರ್ಧರಿಸಬಹುದಾದಂಥ ರೀತಿಯಲ್ಲಿ ಆದೇಶದ ಮೂಲಕ ಯಾವುದೇ ನೋಂದಣಿಯನ್ನು ಅಮಾನತ್ತಿನಲ್ಲಿಡಬಹುದು ಅಥವಾ ರದ್ದುಪಡಿಸಬಹುದು:

ಪರಂತು, ಈ ಉಪಪ್ರಕರಣದ ಮೇರೆಗೆ, ಸಂಬಂಧಿಸಿದ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡಿದ ಹೊರತು ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.";

(ಜಿ) (7)ನೇ ಉಪಪ್ರಕರಣಕ್ಕೆ ಬದಲಾಗಿ, ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು:–

"(7) ಪ್ರಾಧಿಕಾರವು, ವಿನಿಯಮನಗಳ ಮೂಲಕ ನಿರ್ಧರಿಸಬಹುದಾದಂತೆ, ಐದು ಸಾವಿರ ರೂಪಾಯಿಗಳನ್ನು ಮೀರದಂಥ ಶುಲ್ಕವನ್ನು ಸಂದಾಯ ಮಾಡಿದ ಮೇಲೆ, ಕಳೆದುಹೋದ, ನಾಶವಾದ ಅಥವಾ ವಿರೂಪಗೊಂಡ ಪ್ರಮಾಣ ಪತ್ರಕ್ಕೆ ಬದಲಾಗಿ ಅಥವಾ ಯಾವುದೇ ಇತರ ಸಂದರ್ಭದಲ್ಲಿ ಪ್ರಾಧಿಕಾರವು ಪ್ರಮಾಣ ಪತ್ರದ ದ್ವಿಪ್ರತಿಯನ್ನು ನೀಡುವುದು ಅವಶ್ಯವೆಂದು ಅಭಿಪ್ರಾಯಪಟ್ಟಲ್ಲಿ, ನೋಂದಣಿ ಪ್ರಮಾಣಪತ್ರದ ದ್ವಿಪ್ರತಿಯನ್ನು ನೀಡಬಹುದು.".

8. 3ಎ ಪ್ರಕರಣದ,–

(ಎ) (1)ನೇ ಉಪಪ್ರಕರಣದಲ್ಲಿ, "31ನೇ ಡಿಸೆಂಬರ್, 1941" ಎಂಬುದಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು:–

"ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದ ನಂತರ 31ನೇ ಮಾರ್ಚ್.";

(ಬಿ) (2)ನೇ ಉಪಪ್ರಕರಣದಲ್ಲಿ,–

(i) "ನಿಯಮಿಸಲಾದ ಶುಲ್ಕ" ಎಂಬುದಕ್ಕೆ ಬದಲಾಗಿ "ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ಧರಿಸಿದಂಥ ಶುಲ್ಕ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು";

(ii) (i)ನೇ ಖಂಡಕ್ಕೆ ಬದಲಾಗಿ, ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು:-

"(i) ಅಂಥ ಪ್ರೀಮಿಯಂ ಆದಾಯದ ಶೇಕಡ ಒಂದರ ಕಾಲುಭಾಗವನ್ನು ಮೀರುವ ಅಥವಾ ಐದು ಕೋಟಿ ರೂಪಾಯಿ, ಇದರಲ್ಲಿ ಯಾವುದು ಕಡಿಮೆಯೋ ಅದನ್ನು";

(iii) (ii)ನೇ ಖಂಡಕ್ಕೆ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು:-

"(ii) ಯಾವುದೇ ಸಂದರ್ಭದಲ್ಲಿ ವಿಮಾ ವ್ಯವಹಾರದ ಪ್ರತಿಯೊಂದು ವರ್ಗಕ್ಕಾಗಿ ಐವತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ";

(ಸಿ) (3)ನೇ ಉಪಪ್ರಕರಣದಲ್ಲಿ, "ನಿಯಮಿಸಲಾದ ಶುಲ್ಕ" ಎಂಬುದಕ್ಕೆ ಬದಲಾಗಿ "ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ಧರಿಸಿದಂಥ ಶುಲ್ಕ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ಡಿ) (4)ನೇ ಉಪಪ್ರಕರಣದಲ್ಲಿ, "ನಿಯಮಿಸಲಾದ ಶುಲ್ಕ" ಎಂಬುದಕ್ಕೆ ಬದಲಾಗಿ "ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ಧರಿಸಿದಂಥ ಶುಲ್ಕ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು; ಮತ್ತು

**9.** 6ನೇ ಪ್ರಕರಣಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು:-

**"6. ಬಂಡವಾಳಕ್ಕೆ ಸಂಬಂಧಿಸಿದ ಅಗತ್ಯತೆ.**- ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದಂದು ಅಥವಾ ನಂತರ ಭಾರತದಲ್ಲಿ ಜೀವವಿಮೆ, ಸಾಮಾನ್ಯ ವಿಮೆ ಅಥವಾ ಮರು-ವಿಮೆ ವ್ಯವಹಾರವನ್ನು ನಡೆಸುವ ಯಾವನೇ ವಿಮಾಕರ್ತನು,-

(i) ಜೀವ ವಿಮಾ ಅಥವಾ ಸಾಮಾನ್ಯ ವಿಮಾ ವ್ಯವಹಾರವನ್ನು ಒಬ್ಬ ವ್ಯಕ್ತಿ ನಡೆಸುತ್ತಿರುವ ಸಂದರ್ಭದಲ್ಲಿ ಒಂದು ನೂರು ಕೋಟಿ ರೂಪಾಯಿಗಳ ಸಂದಾಯಿತ ಈಕ್ವಿಟಿ ಬಂಡವಾಳವನ್ನು ಅವನು ಹೊಂದಿದ್ದ ಹೊರತು; ಅಥವಾ

(ii) ಒಬ್ಬ ವ್ಯಕ್ತಿ ಪ್ರತ್ಯೇಕವಾಗಿ ಮರು ವಿಮಾಕರ್ತನಾಗಿ ವ್ಯವಹಾರವನ್ನು ನಡೆಸುತ್ತಿರುವ ಸಂದರ್ಭದಲ್ಲಿ ಎರಡು ನೂರು ಕೋಟಿ ರೂಪಾಯಿಗಳ ಸಂದಾಯಿತ ಈಕ್ವಿಟಿ ಬಂಡವಾಳವನ್ನು ಅವನು ಹೊಂದಿದ್ದ ಹೊರತು

- ನೋಂದಾಯಿಸಿಕೊಳ್ಳತಕ್ಕದ್ದಲ್ಲ:

ಪರಂತು, (i)ನೇ ಖಂಡದ ಅಥವಾ (ii)ನೇ ಖಂಡದ ಮೇರೆಗೆ ನಿರ್ದಿಷ್ಟಪಡಿಸಲಾದ ಸಂದಾಯಿತ ಈಕ್ವಿಟಿ ಬಂಡವಾಳವನ್ನು ನಿರ್ಧರಿಸುವಾಗ, 7ನೇ ಪ್ರಕರಣದ ಮೇರೆಗೆ ಮಾಡಬೇಕಾದ ಠೇವಣಿಯನ್ನು ಮತ್ತು ಕಂಪನಿಯನ್ನು ರಚಿಸುವಲ್ಲಿ ಮತ್ತು ನೋಂದಾಯಿಸುವಲ್ಲಿ ಮಾಡಿದ ಯಾವುದೇ ಪ್ರಾರಂಭಿಕ ವೆಚ್ಚಗಳನ್ನು ಹೊರತುಪಡಿಸತಕ್ಕದ್ದು:

ಮತ್ತೂ ಪರಂತು, ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭಕ್ಕೆ ಮುಂಚೆ ಭಾರತದಲ್ಲಿ ಜೀವ ವಿಮೆ, ಸಾಮಾನ್ಯ ವಿಮೆ ಅಥವಾ ಮರು ವಿಮಾ ವ್ಯವಹಾರ ನಡೆಸುತ್ತಿರುವ ಮತ್ತು ಈ ಅಧಿನಿಯಮದ ಮೇರೆಗೆ ನೋಂದಾಯಿಸಿಕೊಳ್ಳಬೇಕಾದ ವಿಮಾಕರ್ತನು ಆ ಅಧಿನಿಯಮವು ಪ್ರಾರಂಭವಾದ ಆರು ತಿಂಗಳೊಳಗಾಗಿ, ಸಂದರ್ಭಾನುಸಾರ (i)ನೇ ಖಂಡದ ಮತ್ತು (ii)ನೇ ಖಂಡದ ಅನುಸಾರವಾಗಿ ಸಂದಾಯಿತ ಈಕ್ವಿಟಿ ಬಂಡವಾಳವನ್ನು ಹೊಂದಿರತಕ್ಕದ್ದು.".

10. 6ಎ ಪ್ರಕರಣದ,-

(ಎ) (4)ನೇ ಉಪಪ್ರಕರಣದ (ಬಿ) ಖಂಡದಲ್ಲಿ,-

(I) (i)ನೇ ಉಪಖಂಡದಲ್ಲಿ, ಕೊನೆಯಲ್ಲಿ ಬರುವ "ಮತ್ತು" ಎಂಬುದನ್ನು ಬಿಟ್ಟುಬಿಡತಕ್ಕದ್ದು;

(II) (ii)ನೇ ಉಪಖಂಡದಲ್ಲಿ, "ವರ್ಗಾವಣೆಗೆ ಕೇಂದ್ರ ಸರ್ಕಾರದ ಮಂಜೂರಾತಿ ಪಡೆಯಲಾಗಿದೆ" ಎಂಬುದರ ಬದಲಾಗಿ "ವರ್ಗಾವಣೆಗೆ ಪ್ರಾಧಿಕಾರದ ಅನುಮೋದನೆ ಪಡೆಯಲಾಗಿದೆ" ಎಂಬುದನ್ನು ಸೇರಿಸತಕ್ಕದ್ದು;"

(III) (ii)ನೇ ಉಪಖಂಡದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:-

'(iii) ಯಾರೇ ವ್ಯಕ್ತಿ, ಫರ್ಮ್, ಸಮೂಹ, ಸಮೂಹ ಘಟಕಗಳು, ಅಥವಾ ಅದೇ ಆಡಳಿತ ವರ್ಗದ ಅಡಿಯಲ್ಲಿನ ನಿಗಮಿತ ನಿಕಾಯವು ವರ್ಗಾಯಿಸಬೇಕೆಂದು ಉದ್ದೇಶಿಸಿರುವ ಷೇರುಗಳ ನಾಮಮಾತ್ರ ಮೌಲ್ಯವು ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ವಿಮಾಕರ್ತನ ಸಂದಾಯಿತ ಈಕ್ವಿಟಿ ಬಂಡವಾಳದ ಶೇಕಡ ಒಂದನ್ನು ಮೀರಿದ್ದು, ಅಂಥ ವರ್ಗಾವಣೆಗೆ ಪ್ರಾಧಿಕಾರದ ಪೂರ್ವಾನುಮೋದನೆಯನ್ನು ಪಡೆದಿದ್ದ ಹೊರತು;

**ವಿವರಣೆ:**- ಈ ಉಪಖಂಡದ ಉದ್ದೇಶಗಳಿಗಾಗಿ, "ಸಮೂಹ" ಮತ್ತು "ಅದೇ ಆಡಳಿತ ವರ್ಗ" ಎಂಬ ಪದಾವಳಿಗಳು ಏಕಸ್ವಾಮ್ಯ ಮತ್ತು ಪರಿಬಂಧಕ ವ್ಯಾಪಾರ ಪದ್ಧತಿ ಅಧಿನಿಯಮ, 1969 (1969ರ 54)ರಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವಂಥವೇ ಅರ್ಥಗಳನ್ನು ಹೊಂದಿರತಕ್ಕದ್ದು.' ;

(ಬಿ) (11)ನೇ ಉಪಪ್ರಕರಣದಲ್ಲಿ,-

(i) "ವಿವರಣೆ-1" ಎಂಬುದಕ್ಕೆ ಬದಲಾಗಿ "ವಿವರಣೆ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ii) ವಿವರಣೆ-2 ಇದನ್ನು ಬಿಟ್ಟುಬಿಡತಕ್ಕದ್ದು.

11. 6ಎ ಪ್ರಕರಣದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:-

"**6ಎಎ. ಕೆಲವು ಸಂದರ್ಭಗಳಲ್ಲಿ ಪ್ರವರ್ತಕನು ಹೊಂದಿರುವ ಅಧಿಕ ಷೇರುಗಳನ್ನು ತ್ಯಜಿಸುವ ರೀತಿ.**- (1) ಯಾರೇ ಪ್ರವರ್ತಕನು, ಯಾವುದೇ ಕಾಲದಲ್ಲಿ ಭಾರತ ವಿಮಾ ಕಂಪನಿಯಲ್ಲಿ ಸಂದಾಯಿತ ಈಕ್ವಿಟಿ ಬಂಡವಾಳದ ಶೇಕಡಾ ಇಪ್ಪತ್ತಾರಕ್ಕಿಂತ ಅಥವಾ ನಿಯಮಿಸಬಹುದಾದಂಥ ಶೇಕಡಾ ಪ್ರಮಾಣಕ್ಕಿಂತ ಹೆಚ್ಚಿಗೆ ಹೊಂದಿರತಕ್ಕದ್ದಲ್ಲ:

ಪರಂತು, ಪ್ರವರ್ತಕರು ಸಂದಾಯಿತ ಈಕ್ವಿಟಿ ಬಂಡವಾಳದ ಶೇಕಡಾ ಇಪ್ಪತ್ತಾರಕ್ಕಿಂತ ಅಥವಾ ನಿಯಮಿಸಬಹುದಾದ ಶೇಕಡಾ ಪ್ರಮಾಣಕ್ಕಿಂತ ಹೆಚ್ಚಿಗೆ ಜೀವ ವಿಮಾ, ಸಾಮಾನ್ಯ ವಿಮಾ ಅಥವಾ ಮರು ವಿಮಾ ವ್ಯವಹಾರವನ್ನು ಭಾರತ ವಿಮಾ ಕಂಪನಿಯು ಪ್ರಾರಂಭಿಸಿದ ಸಂದರ್ಭದಲ್ಲಿ ಪ್ರವರ್ತಕರು, ಅಂಥ ಭಾರತ ವಿಮಾ ಕಂಪನಿಯು ಸದರಿ ವ್ಯವಹಾರವನ್ನು ಪ್ರಾರಂಭಿಸಿದ ದಿನಾಂಕದಿಂದ ಹತ್ತು ವರ್ಷಗಳ ಅವಧಿಯ ನಂತರ ಅಥವಾ ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ಅವಧಿಯೊಳಗಾಗಿ ಸಂದಾಯಿತ ಈಕ್ವಿಟಿ ಬಂಡವಾಳದ ಶೇಕಡಾ ಇಪ್ಪತ್ತಾರಕ್ಕಿಂತ ಹೆಚ್ಚಿನ ಷೇರು ಬಂಡವಾಳವನ್ನು ಅಥವಾ ನಿಯಮಿಸಬಹುದಾದಂಥ ಸಂದಾಯಿತ ಈಕ್ವಿಟಿ ಬಂಡವಾಳಕ್ಕಿಂತ ಹೆಚ್ಚು ಷೇರು ಬಂಡವಾಳವನ್ನು ಹಂತ ಹಂತವಾಗಿ ತ್ಯಜಿಸತಕ್ಕದ್ದು.

**ವಿವರಣೆ:**- ತೊಂದರೆಗಳ ನಿವಾರಣೆಗಾಗಿ, ಪರಂತುಕದಲ್ಲಿ ಒಳಗೊಂಡಿರುವುದು ಯಾವುದೂ, 2ನೇ ಪ್ರಕರಣದ (7ಎ) ಖಂಡದ (ಬಿ) ಉಪಖಂಡದಲ್ಲಿ ಉಲ್ಲೇಖಿಸಿರುವ ವಿದೇಶಿ ಕಂಪನಿಯಾಗಿರುವ ಪ್ರವರ್ತಕರುಗಳಿಗೆ ಅನ್ವಯಿಸತಕ್ಕದ್ದಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ.

(2) (1)ನೇ ಉಪಪ್ರಕರಣದ ಮೇರೆಗೆ ಅಧಿಕ ಷೇರು ಬಂಡವಾಳವನ್ನು ತ್ಯಜಿಸುವ ರೀತಿ ಮತ್ತು ಪ್ರಕ್ರಿಯೆಯನ್ನು ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸತಕ್ಕದ್ದು.".

12. 7ನೇ ಪ್ರಕರಣದ,–

(ಎ) (1)ನೇ ಉಪಪ್ರಕರಣದಲ್ಲಿ,–

(i) "2ನೇ ಪ್ರಕರಣದ (9)ನೇ ಖಂಡದ (ಸಿ) ಉಪಖಂಡದಲ್ಲಿ ನಿರ್ದಿಷ್ಟಪಡಿಸಿದ ವಿಮಾಕರ್ತನಾಗಿರದ" ಎಂಬುದನ್ನು ಬಿಟ್ಟುಬಿಡತಕ್ಕದ್ದು.

(ii) (ಎ) ಮತ್ತು (ಬಿ) ಖಂಡಗಳ ಬದಲಾಗಿ, ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು:–

"(ಎ) ಜೀವ ವಿಮಾ ವ್ಯವಹಾರದ ಸಂದರ್ಭದಲ್ಲಿ, 31ನೇ ಮಾರ್ಚ್, 2000ದ ನಂತರ ಪ್ರಾರಂಭವಾಗುವ ಯಾವುದೇ ಹಣಕಾಸು ವರ್ಷದಲ್ಲಿ ಭಾರತದಲ್ಲಿ ದಾಖಲಿಸಿರುವ, ಹತ್ತು ಕೋಟಿ ರೂಪಾಯಿಗಳಿಗೆ ಮೀರದ ಅವನ ಒಟ್ಟು ಪ್ರೀಮಿಯಂನ ಶೇಕಡ ಒಂದಕ್ಕೆ ಸಮನಾದ ಮೊತ್ತ;

(ಬಿ) ಸಾಮಾನ್ಯ ವಿಮಾ ವ್ಯವಹಾರದ ಸಂದರ್ಭದಲ್ಲಿ, 31ನೇ ಮಾರ್ಚ್, 2000ದ ನಂತರ ಪ್ರಾರಂಭವಾಗುವ ಯಾವುದೇ ಹಣಕಾಸು ವರ್ಷದಲ್ಲಿ ಭಾರತದಲ್ಲಿ ದಾಖಲಿಸಿರುವ, ಹತ್ತು ಕೋಟಿ ರೂಪಾಯಿಗಳನ್ನು ಮೀರದ ಅವನ ಒಟ್ಟು ಪ್ರೀಮಿಯಂನ ಶೇಕಡಾ ಒಂದಕ್ಕೆ ಸಮನಾದ ಮೊತ್ತ;

(ಸಿ) ಮರು ವಿಮಾ ವ್ಯವಹಾರದ ಸಂದರ್ಭದಲ್ಲಿ, ಇಪ್ಪತ್ತು ಕೋಟಿ ರೂ.ಗಳ ಮೊತ್ತ:";

(ಬಿ) (1ಎ), (1ಬಿ), (1ಸಿ), (1ಡಿ) ಮತ್ತು (1ಇ) ಉಪ ಪ್ರಕರಣಗಳನ್ನು ಬಿಟ್ಟುಬಿಡತಕ್ಕದ್ದು.

13. 11ನೇ ಪ್ರಕರಣದ,–

(ಎ) (1)ನೇ ಉಪಪ್ರಕರಣದಲ್ಲಿ, "ಕ್ಯಾಲೆಂಡರ್ ವರ್ಷ" ಎಂಬುದರ ಬದಲಾಗಿ "ಹಣಕಾಸು ವರ್ಷ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ಬಿ) (1)ನೇ ಉಪಪ್ರಕರಣದ ನಂತರ, ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು:–

"(1ಎ) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಪ್ರತಿಯೊಬ್ಬ ವಿಮಾಕರ್ತನು, ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದಂದು ಅಥವಾ ನಂತರ, ಅವನು ನಡೆಸಿದ ವಿಮಾ ವ್ಯವಹಾರದ ಸಂಬಂಧದಲ್ಲಿ ಮತ್ತು ಅವನ ಷೇರುಧಾರಕರ ನಿಧಿಗಳ ಸಂಬಂಧದಲ್ಲಿ ಪ್ರತಿಯೊಂದು ಹಣಕಾಸು ವರ್ಷದ ಮುಕ್ತಾಯದಲ್ಲಿ ಪ್ರಾಧಿಕಾರವು ರಚಿಸಿದ ವಿನಿಯಮನಗಳಿಗೆ ಅನುಸಾರವಾಗಿ ಆ ವರ್ಷಕ್ಕೆ ಸಂಬಂಧಿಸಿದ ಒಂದು ಜಮಾ ಖರ್ಚು ಪಟ್ಟಿಯನ್ನು, ಲಾಭ ಮತ್ತು ನಷ್ಟ ಲೆಕ್ಕಪತ್ರವನ್ನು, ಸ್ವೀಕೃತಿ ಮತ್ತು ಸಂದಾಯಗಳ ಒಂದು ಪ್ರತ್ಯೇಕ ಲೆಕ್ಕಪತ್ರವನ್ನು, ರಾಜಸ್ವ ಲೆಕ್ಕಪತ್ರವನ್ನು ಸಿದ್ಧಪಡಿಸತಕ್ಕದ್ದು.

(1ಬಿ) ಪ್ರತಿಯೊಬ್ಬ ವಿಮಾಕರ್ತನು ಷೇರುದಾರರ ಮತ್ತು ಪಾಲಿಸಿದಾರರ ನಿಧಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಲೆಕ್ಕಪತ್ರಗಳನ್ನು ಇಡತಕ್ಕದ್ದು.".

14. 13ನೇ ಪ್ರಕರಣದ,–

(ಎ) (1)ನೇ ಉಪಪ್ರಕರಣದಲ್ಲಿ,–

(i) "ಪ್ರತಿ ಮೂರು ವರ್ಷಗಳಲ್ಲಿ ಕನಿಷ್ಠ ಒಂದು ಬಾರಿ" ಎಂಬುದಕ್ಕೆ ಬದಲಾಗಿ "ಪ್ರತಿವರ್ಷ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ii) ಮೊದಲನೆಯ ಪರಂತುಕದಲ್ಲಿ, "ನಾಲ್ಕು ವರ್ಷಗಳನ್ನು ಮೀರದಂತೆ" ಎಂಬುದರ ಬದಲಾಗಿ "ಎರಡು ವರ್ಷಗಳನ್ನು ಮೀರದಂತೆ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು";

(iii) ಎರಡನೆಯ ಪರಂತುಕದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:–

"ಪರಂತು ಅದೂ ಅಲ್ಲದೆ, ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಭಾರತದಲ್ಲಿ ಜೀವ ವಿಮಾ ವ್ಯವಹಾರವನ್ನು ನಡೆಸುತ್ತಿರುವ ಒಬ್ಬ ವಿಮಾಕರ್ತನಿಗಾಗಿ ಅಂಥ ಪ್ರಾರಂಭದ ನಂತರ ವಿಮಾ ಗಣಕನ ಮೂಲಕ ಮಾಡಿಸತಕ್ಕ ಮೊದಲ ತನಿಖೆಯ ಕೊನೆಯ ದಿನಾಂಕವು 2001ರ ಮಾರ್ಚ್ 31ನೇ ದಿನ ಆಗಿರತಕ್ಕದ್ದು:";

(iv) ಮೂರನೆಯ ಪರಂತುಕದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:–

"ಪರಂತು ಅದೂ ಅಲ್ಲದೆ, ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದಂದು ಅಥವಾ ನಂತರ ಪ್ರತಿಯೊಬ್ಬ ವಿಮಾಕರ್ತನು ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಿದ ರೀತಿಯಲ್ಲಿ ಸಲ್ಲಿಸಬೇಕಾದ ವಿಮಾ ಗಣಕನ ವರದಿಯ ಒಂದು ಸಂಕ್ಷಿಪ್ತಿಯನ್ನು ಸಿದ್ಧಪಡಿಸುವಂತೆ ಮಾಡತಕ್ಕದ್ದು." ;

(ಬಿ) (4)ನೇ ಉಪಪ್ರಕರಣದಲ್ಲಿ, ಪರಂತುಕದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:–

"ಮತ್ತೂ ಪರಂತು, (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ವಿವರಪಟ್ಟಿಕೆಯನ್ನು ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಲಗತ್ತಿಸತಕ್ಕದ್ದು.".

15. 27ಬಿ ಪ್ರಕರಣದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು:–

"**27ಸಿ. ಭಾರತದ ಹೊರಗಡೆ ನಿಧಿಗಳ ಹೂಡಿಕೆಗೆ ನಿಷೇಧ.**– ಯಾರೇ ವಿಮಾಕರ್ತನು ಪಾಲಿಸಿದಾರರ ನಿಧಿಗಳನ್ನು ಭಾರತದ ಹೊರಗಡೆ ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಹೂಡಿಕೆ ಮಾಡತಕ್ಕದ್ದಲ್ಲ.

**27ಡಿ. ಹೂಡಿಕೆಯ ರೀತಿ ಮತ್ತು ಷರತ್ತುಗಳು.**– (1) 27ನೇ, 27ಎ ಮತ್ತು 27ಬಿ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಅದಕ್ಕೆ ಬಾಧಕವಾಗದ ಹಾಗೆ ಪ್ರಾಧಿಕಾರವು, ಪಾಲಿಸಿದಾರರ ಹಿತದೃಷ್ಟಿಯಿಂದ ಈ ಅಧಿನಿಯಮದ ಉದ್ದೇಶಗಳಿಗಾಗಿ ವಿಮಾಕರ್ತನು ಹೊಂದಿರಬೇಕಾದ ಆಸ್ತಿಗಳ ಹೂಡಿಕೆಯ ಕಾಲ, ರೀತಿ ಮತ್ತು ಇತರ ಷರತ್ತುಗಳನ್ನು ತಾನು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದು.

(2) ಪ್ರಾಧಿಕಾರವು, ಯಾವ ಕಾಲ, ರೀತಿ ಮತ್ತು ಇತರ ಷರತ್ತುಗಳಿಗೆ ಒಳಪಟ್ಟು ಪಾಲಿಸಿದಾರರ ನಿಧಿಗಳನ್ನು ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಮೂಲ ಸೌಕರ್ಯಗಳಲ್ಲಿ ಮತ್ತು ಸಾಮಾಜಿಕ ವಲಯದಲ್ಲಿ ತೊಡಗಿಸತಕ್ಕದ್ದೋ ಆ ಕಾಲ, ರೀತಿ ಮತ್ತು ಇತರ ಷರತ್ತುಗಳಿಗಾಗಿ ನಿರ್ದಿಷ್ಟ ನಿರ್ದೇಶನಗಳನ್ನು ನೀಡಬಹುದು ಮತ್ತು ಅಂಥ ವಿನಿಯಮನಗಳು ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದಂದು ಅಥವಾ ನಂತರ ಭಾರತದಲ್ಲಿ ಜೀವ ವಿಮಾ, ಸಾಮಾನ್ಯ ವಿಮಾ, ಅಥವಾ ಮರು ವಿಮಾ ವ್ಯವಹಾರವನ್ನು ನಡೆಸುತ್ತಿರುವ ಎಲ್ಲಾ ವಿಮಾಕರ್ತರಿಗೆ ಏಕರೂಪವಾಗಿ ಅನ್ವಯವಾಗತಕ್ಕದ್ದು.

(3) ಪ್ರಾಧಿಕಾರವು ವ್ಯವಹಾರದ ಸ್ವರೂಪವನ್ನು ಗಣನೆಗೆ ತೆಗೆದುಕೊಂಡ ನಂತರ ಮತ್ತು ಪಾಲಿಸಿದಾರರ ಹಿತಾಸಕ್ತಿಯನ್ನು ರಕ್ಷಿಸುವುದಕ್ಕೆ, ಅವನು ಹೊಂದಬೇಕಾದ ಆಸ್ತಿಗಳ ಹೂಡಿಕೆಯ ಕಾಲಕ್ಕೆ, ರೀತಿಗೆ ಮತ್ತು ಇತರ ಷರತ್ತುಗಳಿಗೆ ಸಂಬಂಧಪಟ್ಟಂತೆ ವಿಮಾಕರ್ತನಿಗೆ ನಿರ್ದೇಶನಗಳನ್ನು ನೀಡಬಹುದು:

ಪರಂತು, ಈ ಉಪಪ್ರಕರಣದ ಮೇರೆಗೆ ನೀಡುವ ಯಾವುದೇ ನಿರ್ದೇಶನವನ್ನು ಸಂಬಂಧಪಟ್ಟ ವಿಮಾಕರ್ತನಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡಿದ ಹೊರತು ನೀಡತಕ್ಕದ್ದಲ್ಲ.".

16. 28ಎ ಪ್ರಕರಣದ (1)ನೇ ಉಪಪ್ರಕರಣದಲ್ಲಿ "31ನೇ ಡಿಸೆಂಬರ್" ಎಂಬುದಕ್ಕೆ ಬದಲಾಗಿ "31ನೇ ಮಾರ್ಚ್" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

21

17. 28ಬಿ ಪ್ರಕರಣದ (1)ನೇ ಉಪಪ್ರಕರಣದಲ್ಲಿ "31ನೇ ಡಿಸೆಂಬರ್" ಎಂಬುದಕ್ಕೆ ಬದಲಾಗಿ "31ನೇ ಮಾರ್ಚ್" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

18. 31ಬಿ ಪ್ರಕರಣದ,–

(ಎ) (1)ನೇ ಉಪಪ್ರಕರಣದಲ್ಲಿ, "ಕೇಂದ್ರ ಸರ್ಕಾರ" ಎಂದು ಕಂಡುಬರುವ ಎರಡೂ ಕಡೆಗಳಲ್ಲಿ ಅದಕ್ಕೆ ಬದಲಾಗಿ "ಪ್ರಾಧಿಕಾರ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ಬಿ) (2)ನೇ ಉಪಪ್ರಕರಣದಲ್ಲಿ "ನಿಯಮಿಸಲಾದ ನಮೂನೆಯಲ್ಲಿ ವಿವರಣೆ" ಎಂಬುದರ ಬದಲಾಗಿ "ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಿದ ನಮೂನೆಯಲ್ಲಿ ವಿವರಣೆ" ಎಂಬುದನ್ನು ಸೇರಿಸತಕ್ಕದ್ದು;

(ಸಿ) (3)ನೇ ಉಪಪ್ರಕರಣದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು:–

"(4) ಈ ಪ್ರಕರಣದ ಮೇರೆಗಿನ ಪ್ರತಿಯೊಂದು ನಿರ್ದೇಶನವನ್ನು ಪ್ರಾಧಿಕಾರವು ಮಾಡಿದ ಆದೇಶದ ಮೂಲಕ ನೀಡತಕ್ಕದ್ದು:

ಪರಂತು, ಈ ಪ್ರಕರಣದ ಮೇರೆಗಿನ ಯಾವುದೇ ಆದೇಶವನ್ನು ಸಂಬಂಧಿಸಿದ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ಹೊರತು ಮಾಡತಕ್ಕದ್ದಲ್ಲ.".

19. 32ಎ ಪ್ರಕರಣದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು.–

**"32ಬಿ. ಗ್ರಾಮೀಣ ಅಥವಾ ಸಾಮಾಜಿಕ ವಲಯದಲ್ಲಿ ವಿಮಾ ವ್ಯವಹಾರ.–** ಪ್ರತಿಯೊಬ್ಬ ವಿಮಾಕರ್ತನು, ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದ ನಂತರ, ಗ್ರಾಮೀಣ ಅಥವಾ ಸಾಮಾಜಿಕ ವಲಯದಲ್ಲಿ ಜೀವವಿಮಾ ವ್ಯವಹಾರ ಮತ್ತು ಸಾಮಾನ್ಯ ವಿಮಾ ವ್ಯವಹಾರಗಳನ್ನು ಈ ಬಗ್ಗೆ ಪ್ರಾಧಿಕಾರವು ರಾಜಪತ್ರದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಶೇಕಡಾ ಪ್ರಮಾಣಗಳಲ್ಲಿ ಕೈಕೊಳ್ಳತಕ್ಕದ್ದು.

**32ಸಿ. ಗ್ರಾಮೀಣ ಅಥವಾ ಅಸಂಘಟಿತ ವಲಯ ಮತ್ತು ಹಿಂದುಳಿದ ವರ್ಗಗಳ ಸಂಬಂಧದಲ್ಲಿ ವಿಮಾಕರ್ತನ ಹೊಣೆಗಾರಿಕೆಗಳು.–** ಪ್ರತಿಯೊಬ್ಬ ವಿಮಾಕರ್ತನು, ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದ ನಂತರ, ಅಂಥ ಗ್ರಾಮೀಣ ವಲಯದಲ್ಲಿ ವಾಸಿಸುತ್ತಿರುವ ವ್ಯಕ್ತಿಗಳಿಗೆ, ಅಸಂಘಟಿತ ಅಥವಾ ಅನೌಪಚಾರಿಕ ವಲಯದಲ್ಲಿನ ಕಾರ್ಮಿಕರಿಗೆ ಅಥವಾ ಸಮಾಜದ ಆರ್ಥಿಕವಾಗಿ ದುರ್ಬಲರಾದವರಿಗೆ ಅಥವಾ ಹಿಂದುಳಿದ ವರ್ಗದವರಿಗೆ ಮತ್ತು ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರವರ್ಗಗಳಿಗೆ ಜೀವವಿಮಾ ಅಥವಾ ಸಾಮಾನ್ಯ ವಿಮಾ ಪಾಲಿಸಿಗಳನ್ನು ಒದಗಿಸಲು 32ಬಿ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಹೊಣೆಗಾರಿಕೆಗಳನ್ನು ನಿರ್ವಹಿಸತಕ್ಕದ್ದು ಮತ್ತು ಅಂಥ ವಿಮಾ ಪಾಲಿಸಿಗಳು, ಬೆಳೆ ವಿಮೆಗಳನ್ನು ಸಹ ಒಳಗೊಳ್ಳತಕ್ಕದ್ದು.".

20. 33ನೇ ಪ್ರಕರಣಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು:–

**'ತನಿಖೆ**

**33. ತನಿಖೆ ಮತ್ತು ಪರಿಶೀಲನೆ ಮಾಡಲು ಪ್ರಾಧಿಕಾರದ ಅಧಿಕಾರ.–** (1) ಪ್ರಾಧಿಕಾರವು, ಯಾವುದೇ ಕಾಲದಲ್ಲಿ, ಲಿಖಿತ ಆದೇಶದ ಮೂಲಕ, ಆದೇಶದಲ್ಲಿ ನಿರ್ದಿಷ್ಟಪಡಿಸಿದ ಯಾರೇ ವ್ಯಕ್ತಿಯನ್ನು (ಈ ಪ್ರಕರಣದಲ್ಲಿ ಇನ್ನು ಮುಂದೆ "ತನಿಖಾ ಪ್ರಾಧಿಕಾರಿ" ಎಂದು ಉಲ್ಲೇಖಿಸಲಾಗಿದೆ) ಯಾರೇ ವಿಮಾಕರ್ತನ ವ್ಯವಹಾರವನ್ನು ತನಿಖೆ ಮಾಡುವುದಕ್ಕೆ ಮತ್ತು ಅಂಥ ತನಿಖಾ ಪ್ರಾಧಿಕಾರಿಯು ಮಾಡಿದ ಯಾವುದೇ ತನಿಖೆಯ ಮೇಲೆ ವರದಿ ಮಾಡಲು ನಿರ್ದೇಶಿಸಬಹುದು:

ಪರಂತು, ತನಿಖಾ ಪ್ರಾಧಿಕಾರಿಯು, ಈ ಪ್ರಕರಣದ ಮೇರೆಗಿನ ಯಾವುದೇ ತನಿಖೆಯಲ್ಲಿ ಅವನಿಗೆ ನೆರವಾಗುವ ಉದ್ದೇಶಕ್ಕಾಗಿ ಯಾರೇ ಲೆಕ್ಕಪರಿಶೋಧಕನನ್ನು ಅಥವಾ ವಿಮಾಗಣಕನನ್ನು ಅಥವಾ ಅವರಿಬ್ಬರನ್ನೂ ಅವಶ್ಯವಿರುವಲ್ಲೆಲ್ಲಾ ನಿಯೋಜಿಸಬಹುದು.

(2) ಕಂಪನಿಗಳ ಅಧಿನಿಯಮ, 1956 (1956ರ 1)ರ 235ನೇ ಪ್ರಕರಣದಲ್ಲಿ ತದ್ವಿರುದ್ಧವಾದುದು ಏನೇ ಒಳಗೊಂಡಿದ್ದಾಗ್ಯೂ, ತನಿಖಾ ಪ್ರಾಧಿಕಾರವು, ಯಾವುದೇ ಕಾಲದಲ್ಲಿ, ಮತ್ತು ಪ್ರಾಧಿಕಾರಿಯು, ಯಾರೇ ವಿಮಾಕರ್ತನ ಮತ್ತು ಅವನ ಲೆಕ್ಕದ ಪುಸ್ತಕಗಳನ್ನು ತನ್ನ ಒಬ್ಬ ಅಥವಾ ಹೆಚ್ಚು ಅಧಿಕಾರಿಗಳಿಂದ ಪರಿಶೀಲನೆ ಮಾಡುವಂತೆ ನಿರ್ದೇಶಿಸಿದ್ದರೆ ಹಾಗೆ ಮಾಡಿಸತಕ್ಕದ್ದು; ಮತ್ತು ತನಿಖಾ ಪ್ರಾಧಿಕಾರವು ಅಂಥ ಪರಿಶೀಲನೆಯ ಮೇಲಿನ ತನ್ನ ವರದಿಯ ಒಂದು ಪ್ರತಿಯನ್ನು ವಿಮಾಕರ್ತನಿಗೆ ಒದಗಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ತನಿಖೆ ಮಾಡಲು, ಅಥವಾ (2)ನೇ ಉಪಪ್ರಕರಣದ ಮೇರೆಗೆ ಪರಿಶೀಲನೆ ಮಾಡಲು ನಿರ್ದೇಶಿಸಿದ ತನಿಖಾ ಪ್ರಾಧಿಕಾರಿಯ ಮುಂದೆ, ತನ್ನ ಅಭಿರಕ್ಷೆಯಲ್ಲಿರುವ ಅಥವಾ ಅಧಿಕಾರಕ್ಕೊಳಪಟ್ಟಿರುವ ಎಲ್ಲಾ ಅಂಥ ಲೆಕ್ಕದ ಪುಸ್ತಕಗಳನ್ನು, ರಿಜಿಸ್ಟರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಹಾಜರುಪಡಿಸಲು ಮತ್ತು ಸದರಿ ತನಿಖಾ ಪ್ರಾಧಿಕಾರವು ಅಗತ್ಯಪಡಿಸಬಹುದಾದಂತೆ ವಿಮಾಕರ್ತನ ವ್ಯವಹಾರಗಳಿಗೆ ಸಂಬಂಧಿಸಿದ ಯಾವುದೇ ವಿವರಪಟ್ಟಿಕೆ ಮತ್ತು ಮಾಹಿತಿಯನ್ನು ಸದರಿ ತನಿಖಾ ಪ್ರಾಧಿಕಾರಿಯು ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗಾಗಿ ಒದಗಿಸುವುದು ವಿಮಾಕರ್ತನ, ಪ್ರತಿಯೊಬ್ಬ ವ್ಯವಸ್ಥಾಪಕನ, ವ್ಯವಸ್ಥಾಪಕ ನಿರ್ದೇಶಕನ ಅಥವಾ ಇತರ ಅಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ತನಿಖೆ ಮಾಡಲು ಅಥವಾ (2)ನೇ ಉಪಪ್ರಕರಣದ ಮೇರೆಗೆ ಪರಿಶೀಲನೆ ಮಾಡಲು ನಿರ್ದೇಶಿಸಿದ ಯಾರೇ ತನಿಖಾ ಪ್ರಾಧಿಕಾರಿಯು, ಯಾರೇ ವ್ಯವಸ್ಥಾಪಕನನ್ನು, ವ್ಯವಸ್ಥಾಪಕ ನಿರ್ದೇಶಕನನ್ನು ಅಥವಾ ವಿಮಾಕರ್ತನನ್ನು, ಇತರ ಅಧಿಕಾರಿಯನ್ನು ಅವನ ವ್ಯವಹಾರದ ಸಂಬಂಧದಲ್ಲಿ ಪ್ರಮಾಣ ಮಾಡಿಸಿ ಪರೀಕ್ಷಿಸಬಹುದು ಮತ್ತು ತದನುಸಾರವಾಗಿ ಪ್ರಮಾಣವನ್ನು ಮಾಡಿಸಬಹುದು.

(5) ತನಿಖಾ ಪ್ರಾಧಿಕಾರಿಯು, ಪರಿಶೀಲನೆ ಮಾಡಿಸುವಂತೆ ಅವನಿಗೆ ಪ್ರಾಧಿಕಾರವು ನಿರ್ದೇಶಿಸಿದ್ದರೆ, ಮತ್ತು ಯಾವುದೇ ಇತರೆ ಸಂದರ್ಭದಲ್ಲಿ, ಈ ಪ್ರಕರಣದ ಮೇರೆಗೆ ಯಾವುದೇ ಪರಿಶೀಲನೆಯನ್ನು ಮಾಡಿದ ಮೇಲೆ ಆ ಪ್ರಾಧಿಕಾರಕ್ಕೆ ವರದಿ ಮಾಡತಕ್ಕದ್ದು.

(6) (1)ನೇ ಉಪಪ್ರಕರಣದ ಅಥವಾ (5)ನೇ ಉಪಪ್ರಕರಣದ ಮೇರೆಗೆ ಯಾವುದೇ ವರದಿಯನ್ನು ಸ್ವೀಕರಿಸಿದ ಮೇಲೆ, ಪ್ರಾಧಿಕಾರವು, ಆ ವರದಿಗೆ ಸಂಬಂಧಿಸಿದಂತೆ ತಾನು ಸೂಕ್ತವೆಂದು ಅಭಿಪ್ರಾಯಪಡುವ ಮನವಿಯನ್ನು ಸಲ್ಲಿಸಲು ವಿಮಾಕರ್ತನಿಗೆ ಅಂಥ ಅವಕಾಶವನ್ನು ನೀಡಿದ ನಂತರ, ಲಿಖಿತ ಆದೇಶದ ಮೂಲಕ,-

(ಎ) ಪ್ರಾಧಿಕಾರವು ಸೂಕ್ತವೆಂದು ಭಾವಿಸಬಹುದಾದಂತೆ ವರದಿಯಿಂದ ಉದ್ಭವಿಸುವ ಯಾವುದೇ ವಿಷಯದ ಸಂಬಂಧದಲ್ಲಿ ಅಂಥ ಕ್ರಮ ಕೈಗೊಳ್ಳಲು ವಿಮಾಕರ್ತನನ್ನು ಅಗತ್ಯಪಡಿಸಬಹುದು; ಅಥವಾ

(ಬಿ) ವಿಮಾಕರ್ತನ ನೋಂದಣಿಯನ್ನು ರದ್ದುಪಡಿಸಬಹುದು; ಅಥವಾ

(ಸಿ) ವಿಮಾಕರ್ತನು ಒಂದು ಕಂಪನಿಯಾಗಿದ್ದರೆ (ಬಿ) ಖಂಡದ ಮೇರೆಗೆ ವಿಮಾಕರ್ತನ ನೋಂದಣಿಯನ್ನು ರದ್ದುಪಡಿಸಿರಲಿ ಅಥವಾ ರದ್ದುಪಡಿಸಿಲ್ಲದಿರಲಿ, ಅದನ್ನು ಪರಿಸಮಾಪನಗೊಳಿಸುವುದಕ್ಕಾಗಿ ಯಾವುದೇ ನ್ಯಾಯಾಲಯಕ್ಕೆ ಅರ್ಜಿ ಹಾಕುವಂತೆ ಯಾರೇ ವ್ಯಕ್ತಿಗೆ ನಿರ್ದೇಶಿಸಬಹುದು.

(7) ಪ್ರಾಧಿಕಾರವು, ವಿಮಾಕರ್ತನಿಗೆ ಯುಕ್ತ ನೋಟೀಸು ನೀಡಿದ ನಂತರ, (5)ನೇ ಉಪಪ್ರಕರಣದ ಮೇರೆಗೆ ತನಿಖಾ ಪ್ರಾಧಿಕಾರಿಯು ಸಲ್ಲಿಸಿದ ವರದಿಯನ್ನು ಅಥವಾ ಅದಕ್ಕೆ ಅವಶ್ಯವೆಂದು ಕಂಡು ಬರಬಹುದಾದಂಥ ಅದರ ಭಾಗವನ್ನು ಪ್ರಕಟಿಸಬಹುದು.

(8) ಪ್ರಾಧಿಕಾರವು, ವಿಮಾಕರ್ತರು ಅವರ ಪುಸ್ತಕಗಳಲ್ಲಿ ನಿರ್ವಹಿಸಬೇಕಾದ ಕನಿಷ್ಠ ಮಾಹಿತಿ, ಅಂಥ ಮಾಹಿತಿಯನ್ನು ನಿರ್ವಹಿಸತಕ್ಕ ರೀತಿ, ಆ ಸಂಬಂಧವಾಗಿ ವಿಮಾಕರ್ತರು ಅಳವಡಿಸಿಕೊಳ್ಳಬೇಕಾದ ಪರೀಕ್ಷೆಗಳು ಮತ್ತು ಇತರ ಸತ್ಯಾಪನೆಗಳು ಮತ್ತು ಈ ಪ್ರಕರಣದ ಮೇರೆಗೆ ತನ್ನ ಪ್ರಕಾರ್ಯಗಳನ್ನು ತೃಪ್ತಿಕರವಾಗಿ ನಿರ್ವಹಿಸಲು ತನಿಖಾ ಪ್ರಾಧಿಕಾರಿಗೆ ಅವಕಾಶ ಮಾಡಿಕೊಡಲು ಅದರ ಅಭಿಪ್ರಾಯದಲ್ಲಿ ಅಗತ್ಯವೆಂದು ಕಂಡುಬರುವ ಇತರೆ ಎಲ್ಲಾ ಪ್ರಾಸಂಗಿಕ ವಿಷಯಗಳನ್ನು ಅದು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದು.

ವಿವರಣೆ:– ಈ ಪ್ರಕರಣದ ಉದ್ದೇಶಗಳಿಗಾಗಿ, "ವಿಮಾಕರ್ತ" ಎಂಬ ಪದಾವಳಿಯು ಭಾರತದಲ್ಲಿ ನಿಗಮಿತವಾಗಿರುವ ಒಬ್ಬ ವಿಮಾಕರ್ತನ ಸಂದರ್ಭದಲ್ಲಿ,–

(ಎ) ಪ್ರತ್ಯೇಕವಾಗಿ ಭಾರತದ ಹೊರಗಡೆ ವಿಮಾ ವ್ಯವಹಾರವನ್ನು ನಡೆಸುವ ಉದ್ದೇಶಕ್ಕಾಗಿ ರಚಿತವಾದ ಎಲ್ಲಾ ಅದರ ಅಂಗಸಂಸ್ಥೆಗಳನ್ನು; ಮತ್ತು

(ಬಿ) ಭಾರತದಲ್ಲಿ ಅಥವಾ ಭಾರತದ ಹೊರಗಡೆ ಇರುವ ಅದರ ಎಲ್ಲ ಶಾಖೆಗಳನ್ನು

– ಒಳಗೊಳ್ಳತಕ್ಕದ್ದು.

(9) (6)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ಮಾಡಿದ ಆದೇಶವನ್ನು ಹೊರತುಪಡಿಸಿ ಈ ಪ್ರಕರಣದ ಮೇರೆಗೆ ಮಾಡಿದ ಯಾವುದೇ ಆದೇಶವು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸುವಂಥದ್ದು ಆಗಿರತಕ್ಕದ್ದಲ್ಲ.

(10) ಈ ಪ್ರಕರಣದ ಮೇರೆಗೆ ಮಾಡಿದ ಯಾವುದೇ ತನಿಖೆಯ ಮತ್ತು ಅದಕ್ಕೆ ಪ್ರಾಸಂಗಿಕವಾದ ಎಲ್ಲಾ ವೆಚ್ಚಗಳನ್ನು ವಿಮಾಕರ್ತನು ಭರಿಸತಕ್ಕದ್ದು, ಅವುಗಳು ವಿಮಾಕರ್ತನಿಂದ ಬರಬೇಕಾದ ಋಣದ ಮೇಲೆ ಆದ್ಯತೆ ಹೊಂದಿರತಕ್ಕದ್ದು ಮತ್ತು ಅದು ಭೂಕಂದಾಯ ಬಾಕಿಯಂತೆ ವಸೂಲೀಯವಾಗಿರತಕ್ಕದ್ದು.'.

21. 33ಎ ಪ್ರಕರಣದಲ್ಲಿರುವ "ಕೇಂದ್ರ ಸರ್ಕಾರ ಅಥವಾ" ಎಂಬುದನ್ನು ಬಿಟ್ಟುಬಿಡತಕ್ಕದ್ದು.

22. 34ಹೆಚ್ ಪ್ರಕರಣದ,–

(ಎ) (1)ನೇ ಉಪಪ್ರಕರಣದಲ್ಲಿ,–

(i) "ನಿಯಂತ್ರಕ" ಎಂಬುದಕ್ಕೆ ಬದಲಾಗಿ "ಪ್ರಾಧಿಕಾರದ ಅಧ್ಯಕ್ಷ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ii) "ವಿಮಾ ಸಹಾಯಕ ನಿಯಂತ್ರಕ" ಎಂಬುದಕ್ಕೆ ಬದಲಾಗಿ "ಪ್ರಾಧಿಕಾರದಿಂದ ಅಧಿಕೃತಗೊಂಡ ಅಧಿಕಾರಿ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ಬಿ) (5)ನೇ ಮತ್ತು (7)ನೇ ಉಪಪ್ರಕರಣದಲ್ಲಿ "ನಿಯಂತ್ರಕ" ಎಂಬುದಕ್ಕೆ ಬದಲಾಗಿ ಅದು ಬರುವ ಕಡೆಯಲ್ಲೆಲ್ಲಾ "ಪ್ರಾಧಿಕಾರದ ಅಧ್ಯಕ್ಷ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

23. 35ನೇ ಪ್ರಕರಣದ,–

(ಎ) (1)ನೇ ಉಪಪ್ರಕರಣದಲ್ಲಿ "ನಿಯಂತ್ರಕನು ಮಂಜೂರು ಮಾಡಿದ" ಎಂಬುದಕ್ಕೆ ಬದಲಾಗಿ "ಪ್ರಾಧಿಕಾರವು ಅನುಮೋದಿಸಿದ" ಎಂಬುದನ್ನು ಪ್ರತ್ಯಾಯೋಜಿತಕ್ಕದ್ದು;

(ಬಿ) (3)ನೇ ಉಪಪ್ರಕರಣದಲ್ಲಿ,–

(i) ಮೊದಲನೇ ಪ್ಯಾರಾಗ್ರಾಫ್‌ನಲ್ಲಿ, "ಯಾವುದೇ ಅಂಥ ಯೋಜನೆಯನ್ನು ಮಂಜೂರು ಮಾಡಲು" ಎಂಬುದಕ್ಕೆ ಬದಲಾಗಿ "ಯಾವುದೇ ಅಂಥ ಯೋಜನೆಯನ್ನು ಅನುಮೋದಿಸಲು" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

(ii) ಎರಡನೆಯ ಪ್ಯಾರಾಗ್ರಾಫ್‌ನಲ್ಲಿ "ಸಂಯೋಜನೆಯು ಅಥವಾ ವರ್ಗಾವಣೆಯು ಮಂಜೂರಾದರೆ" ಎಂಬುದರ ಬದಲಾಗಿ "ಸಂಯೋಜನೆಯು ಅಥವಾ ವರ್ಗಾವಣೆಯು ಅನುಮೋದನೆಗೊಂಡರೆ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

24. 36ನೇ ಪ್ರಕರಣದ,–

(ಎ) (1)ನೇ ಉಪಪ್ರಕರಣದಲ್ಲಿ "ಏರ್ಪಾಟಿಗೆ ಮಂಜೂರಾತಿ ನೀಡಬಹುದು" ಎಂಬುದಕ್ಕೆ ಬದಲಾಗಿ "ಏರ್ಪಾಟನ್ನು ಅನುಮೋದಿಸಬಹುದು" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ಬಿ) (2)ನೇ ಉಪಪ್ರಕರಣದಲ್ಲಿ,–

(i) "ಸಂಯೋಜನೆಯಲ್ಲಿ ಸಂಬಂಧಿಸಿದ ವಿಮಾಕರ್ತರು, ನಿಯಂತ್ರಕನು ಮಂಜೂರು ಮಾಡಬಹುದು" ಎಂಬುದರ ಬದಲಾಗಿ "ಸಂಯೋಜನೆಯಲ್ಲಿ ಸಂಬಂಧಿಸಿದ ವಿಮಾಕರ್ತರು, ಪ್ರಾಧಿಕಾರವು ಅನುಮೋದಿಸಬಹುದು" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ii) "ನಿಯಂತ್ರಕನು ಮಂಜೂರು ಮಾಡಿದಂಥ ಕರಾರುಗಳು" ಎಂಬುದರ ಬದಲಾಗಿ "ಪ್ರಾಧಿಕಾರವು ಅನುಮೋದಿಸಿದಂಥ ಕರಾರುಗಳು" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

25. 37ನೇ ಪ್ರಕರಣದ (ಸಿ) ಖಂಡದಲ್ಲಿ "ಮಂಜೂರಾದ ಯೋಜನೆ" ಎಂಬುದಕ್ಕೆ ಬದಲಾಗಿ "ಅನುಮೋದನೆಯಾದ ಯೋಜನೆ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

26. 40ಎ ಪ್ರಕರಣದ (3)ನೇ ಉಪ ಪ್ರಕರಣದಲ್ಲಿ "ಮೀರಿದ ಮೊತ್ತ" ಎಂದು ಪ್ರಾರಂಭವಾಗುವ ಮತ್ತು "ಪಾಲಿಸಿ ಮೇಲೆ ಸಂದಾಯ ಮಾಡಲಾಗುವ ಪ್ರಿಮಿಯಂನ ಶೇಕಡಾ ಹತ್ತು" ಎಂಬ ಪದಗಳಿಂದ ಕೊನೆಯಾಗುವ ಭಾಗಗಳ ಬದಲಾಗಿ "ಪಾಲಿಸಿಯು ಅಗ್ನಿ ಅಥವಾ ಸಮುದ್ರ ವಿಮೆಗೆ ಅಥವಾ ಸಂಕೀರ್ಣ ವಿಮೆಗೆ ಸಂಬಂಧಿಸಿರುವಲ್ಲಿ ಆ ಪಾಲಿಸಿಗಳ ಮೇಲೆ ಸಂದಾಯ ಮಾಡಬೇಕಾದ ಪ್ರೀಮಿಯಂನ ಶೇಕಡಾ ಹದಿನೈದನ್ನು ಮೀರದ ಮೊತ್ತ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

27. 42ನೇ ಪ್ರಕರಣದ,–

(ಎ) (1)ನೇ ಉಪಪ್ರಕರಣಕ್ಕೆ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು:–

"(1) ಪ್ರಾಧಿಕಾರವು ಅಥವಾ ಈ ಸಂಬಂಧವಾಗಿ ಅದು ಅಧಿಕೃತಗೊಳಿಸಿದ ಒಬ್ಬ ಅಧಿಕಾರಿಯು, ಅದು ರಚಿಸಿದ ವಿನಿಯಮನಗಳ ಮೂಲಕ ನಿರ್ಧರಿಸಿದ ರೀತಿಯಲ್ಲಿ ಮತ್ತು ವಿನಿಯಮನಗಳ ಮೂಲಕ ನಿರ್ಧರಿಸಲಾದ ಎರಡು ನೂರ ಐವತ್ತು ರೂಪಾಯಿಗಳಿಗಿಂತ ಹೆಚ್ಚಿಲ್ಲದ ಶುಲ್ಕವನ್ನು ಸಂದಾಯ ಮಾಡಿದ ಮೇಲೆ, ವಿನಿಯಮನಗಳ ಮೂಲಕ ನಿರ್ಧರಿಸಿದ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸುವ ಯಾರೇ ವ್ಯಕ್ತಿಗೆ ವಿಮಾ ವ್ಯವಹಾರವನ್ನು ನಡೆಸಲು ಅಪೇಕ್ಷಿಸುವ ಅಥವಾ ಅದನ್ನು ದೊರಕಿಸಿಕೊಳ್ಳುವ ಉದ್ದೇಶಕ್ಕಾಗಿ ವಿಮಾ ಏಜೆಂಟನಾಗಿ ಕಾರ್ಯನಿರ್ವಹಿಸಲು ಲೈಸೆನ್ಸ್‌ನ್ನು ನೀಡತಕ್ಕದ್ದು:

ಪರಂತು,–

(i) ವ್ಯಕ್ತಿಯ ಸಂದರ್ಭದಲ್ಲಿ, ಅವನು (4)ನೇ ಉಪಪ್ರಕರಣದಲ್ಲಿ ಸೂಚಿಸಿರುವ ಯಾವುದೇ ಅನರ್ಹತೆಗಳನ್ನು ಹೊಂದಿರಬಾರದು; ಮತ್ತು

(ii) ಕಂಪನಿ ಅಥವಾ ಫರ್ಮ್‌ನ ಸಂದರ್ಭದಲ್ಲಿ ಅದರ ಯಾರೇ ನಿರ್ದೇಶಕರುಗಳು ಅಥವಾ ಪಾಲುದಾರರು ಯಾವುದೇ ಸದರಿ ಅನರ್ಹತೆಗಳನ್ನು ಹೊಂದಿರಬಾರದು:

ಮತ್ತೂ ಪರಂತು, ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ನೀಡಿದ ಯಾವುದೇ ಲೈಸೆನ್ಸನ್ನು ಅಂಥ ಲೈಸೆನ್ಸ್‌ಗಾಗಿ ಉಪಬಂಧಿಸಿದ ವಿನಿಯಮನಗಳ ಅನುಸಾರವಾಗಿ ನೀಡಲಾದುದೆಂದು ಭಾವಿಸತಕ್ಕದ್ದು." ;

(ಬಿ) (3)ನೇ ಉಪಪ್ರಕರಣಕ್ಕೆ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು:–

"(3) ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999 ಇದರ ಪ್ರಾರಂಭದ ದಿನಾಂಕದ ನಂತರ, ಈ ಪ್ರಕರಣದ ಮೇರೆಗೆ ನೀಡಲಾದ ಲೈಸೆನ್ಸ್, ಅದನ್ನು ನೀಡಿದ ದಿನಾಂಕದಿಂದ ಮೂರು ವರ್ಷಗಳು ಮಾತ್ರ ಜಾರಿಯಲ್ಲಿರತಕ್ಕದ್ದು. ಆದರೆ ಅರ್ಜಿದಾರನು, ಒಬ್ಬ ವ್ಯಕ್ತಿಯಾಗಿದ್ದಲ್ಲಿ ಅಥವಾ

ಕಂಪನಿ ಅಥವಾ ಫರ್ಮ್ ಆಗಿದ್ದಲ್ಲಿ, ಅದರ ಯಾರೇ ನಿರ್ದೇಶಕರು ಅಥವಾ ಪಾಲುದಾರರು (4)ನೇ ಉಪಪ್ರಕರಣದ (ಬಿ), (ಸಿ), (ಡಿ), (ಇ) ಮತ್ತು (ಎಫ್) ಖಂಡಗಳಲ್ಲಿ ಸೂಚಿಸಿರುವ ಯಾವುವೇ ಅನರ್ಹತೆಗಳಿಗೊಳಪಡದಿದ್ದರೆ ಮತ್ತು ಜಾರಿಯಲ್ಲಿರುವ ಲೈಸೆನ್ಸ್ ಅವಧಿ ಮುಕ್ತಾಯವಾಗುವ ದಿನಾಂಕಕ್ಕಿಂತ ಕನಿಷ್ಠ ಮೂವತ್ತು ದಿನಗಳ ಮುಂಚೆ ಲೈಸೆನ್ಸ್‌ನ ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಯು ನೀಡಿಕೆ ಪ್ರಾಧಿಕಾರಕ್ಕೆ ತಲುಪಿದರೆ ಎರಡುನೂರಾ ಐವತ್ತು ರೂಪಾಯಿಗಿಂತ ಹೆಚ್ಚಿರದಂತೆ ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ಧರಿಸಿದ ಶುಲ್ಕವನ್ನು, ಮತ್ತು ಜಾರಿಯಲ್ಲಿರುವ ಲೈಸೆನ್ಸ್ ಅವಧಿ ಮುಕ್ತಾಯವಾಗುವ ದಿನಾಂಕಕ್ಕಿಂತ ಕನಿಷ್ಠ ಮೂವತ್ತು ದಿನಗಳ ಮುಂಚೆ ಲೈಸೆನ್ಸ್ ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಯು, ನೀಡಿಕೆ ಪ್ರಾಧಿಕಾರಕ್ಕೆ ತಲುಪದಿದ್ದಲ್ಲಿ ದಂಡದ ರೂಪದಲ್ಲಿ ಒಂದು ನೂರು ರೂಪಾಯಿಯನ್ನು ಮೀರದಂತೆ ವಿನಿಯಮನಗಳ ಮೂಲಕ ನಿರ್ಧರಿಸಿದ ಹೆಚ್ಚುವರಿ ಮೊಬಲಗನ್ನು ಸಂದಾಯ ಮಾಡಿದ ಮೇಲೆ ಯಾವುದೇ ಒಂದು ಬಾರಿಗೆ ಮೂರು ವರ್ಷಗಳ ಅವಧಿಗೆ ನವೀಕರಣ ಮಾಡತಕ್ಕದ್ದು.";

(ಸಿ) (3ಎ) ಉಪಪ್ರಕರಣದಲ್ಲಿ, ಪರಂತುಕದ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು:–

"ಪರಂತು, ಅನ್ಯಥಾ ಅನುಚಿತ ತೊಂದರೆಯುಂಟಾಗುವುದೆಂದು ಪ್ರಾಧಿಕಾರಕ್ಕೆ ಮನದಟ್ಟಾದರೆ, ಪ್ರಾಧಿಕಾರವು, ಅರ್ಜಿದಾರನಿಂದ ಏಳುನೂರ ಐವತ್ತು ರೂಪಾಯಿಗಳ ದಂಡ ಪಡೆದು ಈ ಉಪಪ್ರಕರಣಕ್ಕೆ ವ್ಯತಿರಿಕ್ತವಾಗಿಯೂ ಯಾವುದೇ ಅರ್ಜಿಯನ್ನು ಅಂಗೀಕರಿಸಬಹುದು";

(ಡಿ) (4)ನೇ ಉಪಪ್ರಕರಣದ (ಡಿ) ಖಂಡದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು.–

"(ಇ) ಈ ಸಂಬಂಧವಾಗಿ ಪ್ರಾಧಿಕಾರವು ರಚಿಸಿದ ವಿನಿಯುಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅಗತ್ಯವಾದ ಅರ್ಹತೆಗಳನ್ನು ಮತ್ತು ಹನ್ನೆರಡು ತಿಂಗಳನ್ನು ಮೀರದ ಅವಧಿಯ ಪ್ರಾಯೋಗಿಕ ತರಬೇತಿಯನ್ನು ಅವನು ಹೊಂದಿಲ್ಲವೆಂದು;

(ಎಫ್) ಈ ಸಂಬಂಧವಾಗಿ ಪ್ರಾಧಿಕಾರವು ರಚಿಸಿದ ವಿನಿಯುಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪರೀಕ್ಷೆಯಲ್ಲಿ ಅವನು ತೇರ್ಗಡೆಯಾಗಿಲ್ಲವೆಂದು:

ಪರಂತು, ಈ ಪ್ರಕರಣದ (1)ನೇ ಉಪ ಪ್ರಕರಣದ ಅಥವಾ 64–ಯುಎಂ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಯಾರಿಗೆ ಲೈಸೆನ್ಸು ನೀಡಿರುತ್ತಾರೋ ಆ ವ್ಯಕ್ತಿಯು (ಇ) ಮತ್ತು (ಎಫ್) ಖಂಡಗಳ ಮೂಲಕ ಅಗತ್ಯ ಅರ್ಹತೆಗಳನ್ನು, ಪ್ರಾಯೋಗಿಕ ತರಬೇತಿಯನ್ನು ಹೊಂದಿರುವುದನ್ನು ಮತ್ತು ಅಂಥ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದನ್ನು ಅಗತ್ಯಪಡಿಸತಕ್ಕದ್ದಲ್ಲ;

(ಜಿ) ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ನೀತಿ ಸಂಹಿತೆಯನ್ನು ಅವನು ಉಲ್ಲಂಘಿಸುತ್ತಾನೆಂದು.";

(ಇ) 6ನೇ ಉಪಪ್ರಕರಣಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು:–

"(6) ಪ್ರಾಧಿಕಾರವು, ವಿನಿಯುಮನಗಳ ಮೂಲಕ ನಿರ್ಧರಿಸಬಹುದಾದಂಥ ಐವತ್ತು ರೂಪಾಯಿಗಳನ್ನು ಮೀರದಂಥ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಕಳೆದುಹೋದ, ನಾಶವಾದ ಅಥವಾ ವಿರೂಪವಾದ ಲೈಸೆನ್ಸಿನ ಬದಲಾಗಿ ಒಂದು ದ್ವಿಪ್ರತಿ ಲೈಸೆನ್ಸನ್ನು ನೀಡಬಹುದು.";

(ಎಫ್) (7)ನೇ ಉಪ ಪ್ರಕರಣದಲ್ಲಿ,–

(i) "ಐವತ್ತು ರೂಪಾಯಿಗಳು" ಎಂಬುದರ ಬದಲಾಗಿ "ಐದು ನೂರು ರೂಪಾಯಿಗಳು" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ii) "ಒಂದು ನೂರು ರೂಪಾಯಿಗಳು" ಎಂಬುದರ ಬದಲಾಗಿ "ಒಂದು ಸಾವಿರ ರೂಪಾಯಿಗಳು" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ಜಿ) (8)ನೇ ಉಪಪ್ರಕರಣದಲ್ಲಿ, "ಐವತ್ತು ರೂಪಾಯಿ"ಗಳು ಎಂಬುದರ ಬದಲಾಗಿ "ಐದು ಸಾವಿರ ರೂಪಾಯಿಗಳು" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

28. 42ಎ ಪ್ರಕರಣದ, (1)ನೇ ಉಪಪ್ರಕರಣದಲ್ಲಿ,-

(ಎ) "ನಿಯಂತ್ರಕ ಅಥವಾ ಅವನು ಅಧಿಕೃತಗೊಳಿಸಿದ ಅಧಿಕಾರಿಯು" ಎಂಬುದಕ್ಕೆ ಬದಲಾಗಿ "ಪ್ರಾಧಿಕಾರ ಅಥವಾ ಅದು ಅಧಿಕೃತಗೊಳಿಸಿದ ಅಧಿಕಾರಿ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ಬಿ) "ಅವನಿಗೆ ಒಂದು ಅರ್ಜಿ" ಎಂಬುದಕ್ಕೆ ಬದಲಾಗಿ "ಅದಕ್ಕೆ ಒಂದು ಅರ್ಜಿ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

29. 42ಸಿ ಪ್ರಕರಣದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:-

**"42ಡಿ. ಮಧ್ಯವರ್ತಿ ಅಥವಾ ವಿಮಾ ಮಧ್ಯವರ್ತಿಗೆ ಲೈಸೆನ್ಸ್ ನೀಡುವುದು.**- (1) ಪ್ರಾಧಿಕಾರವು ಅಥವಾ ಈ ಸಂಬಂಧದಲ್ಲಿ ಅದು ಅಧಿಕೃತಗೊಳಿಸಿದ ಅಧಿಕಾರಿಯು, ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ಧರಿಸಿದ ರೀತಿಯಲ್ಲಿ ಮತ್ತು ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ಧರಿಸಿದ ಶುಲ್ಕಗಳನ್ನು ಸಂದಾಯ ಮಾಡಿದ ಮೇಲೆ, ವಿನಿಯಮನಗಳ ಮೂಲಕ ನಿರ್ಧರಿಸಿದ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಿದ ಮತ್ತು ಇದರಲ್ಲಿ ನಮೂದಿಸಿರುವ ಯಾವುದೇ ಅನರ್ಹತೆಗಳಿಂದ ಕೂಡಿರದ ಯಾರೇ ವ್ಯಕ್ತಿಗೆ ಈ ಅಧಿನಿಯಮದ ಮೇರೆಗೆ ಮಧ್ಯವರ್ತಿ ಅಥವಾ ವಿಮಾ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಲು ಲೈಸೆನ್ಸ್‌ನ್ನು ನೀಡತಕ್ಕದ್ದು:

ಪರಂತು,-

(ಎ) ವ್ಯಕ್ತಿಯ ಸಂದರ್ಭದಲ್ಲಿ, ಅವನು 42ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ನಮೂದಿಸಿರುವ ಯಾವುದೇ ಅನರ್ಹತೆಗೆ ಒಳಗಾಗಿರಬಾರದು; ಅಥವಾ

(ಬಿ) ಕಂಪನಿ ಅಥವಾ ಫರ್ಮ್‌ನ ಸಂದರ್ಭದಲ್ಲಿ ಅದರ ಯಾರೇ ನಿರ್ದೇಶಕರು ಅಥವಾ ಪಾಲುದಾರರು ಯಾವುದೇ ಸದರಿ ಅನರ್ಹತೆಗಳಿಗೆ ಒಳಗಾಗಿರಬಾರದು.

(2) ಈ ಪ್ರಕರಣದ ಮೇರೆಗೆ ನೀಡಲಾದ ಲೈಸೆನ್ಸು ಅದರ ಧಾರಕನನ್ನು ಮಧ್ಯವರ್ತಿ ಅಥವಾ ವಿಮಾ ಮಧ್ಯವರ್ತಿ ಆಗಿ ಕಾರ್ಯನಿರ್ವಹಿಸಲು ಹಕ್ಕುಳ್ಳವನನ್ನಾಗಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ನೀಡಲಾದ ಲೈಸೆನ್ಸು, ಅದನ್ನು ನೀಡಿದ ದಿನಾಂಕದಿಂದ ಮೂರು ವರ್ಷಗಳು ಮಾತ್ರ ಜಾರಿಯಲ್ಲಿರತಕ್ಕದ್ದು, ಆದರೆ ಅರ್ಜಿದಾರನು ಒಬ್ಬ ವ್ಯಕ್ತಿಯಾಗಿದ್ದು ಕಂಪನಿ ಅಥವಾ ಫರ್ಮ್ ಆಗಿಲ್ಲದಿದ್ದರೆ ಅದರ ಯಾರೇ ನಿರ್ದೇಶಕರು ಅಥವಾ ಪಾಲುದಾರರು 42ನೇ ಪ್ರಕರಣದ (4)ನೇ ಉಪ ಪ್ರಕರಣದ (ಬಿ), (ಸಿ), (ಡಿ), (ಇ) ಮತ್ತು (ಎಫ್) ಖಂಡಗಳಲ್ಲಿ ಸೂಚಿಸಿರುವ ಯಾವುದೇ ಅನರ್ಹತೆಗಳಿಗೊಳಪಡದಿದ್ದರೆ ಮತ್ತು ಜಾರಿಯಲ್ಲಿರುವ ಲೈಸೆನ್ಸ್ ಅವಧಿ ಮುಕ್ತಾಯವಾಗುವ ದಿನಾಂಕಕ್ಕಿಂತ ಕನಿಷ್ಠ ಮೂವತ್ತು ದಿನಗಳ ಮುಂಚೆ ಲೈಸೆನ್ಸ್‌ನ್ನು ನವೀಕರಣ ಮಾಡಿಸಲು ಸಲ್ಲಿಸಿದ ಅರ್ಜಿಯು ನೀಡಿಕೆ ಪ್ರಾಧಿಕಾರಕ್ಕೆ ತಲುಪಿದರೆ, ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ಧರಿಸಿದ ಶುಲ್ಕವನ್ನು ಮತ್ತು ಜಾರಿಯಲ್ಲಿರುವ ಲೈಸೆನ್ಸ್ ಅವಧಿ ಮುಕ್ತಾಯವಾಗುವ ದಿನಾಂಕಕ್ಕಿಂತ ಕನಿಷ್ಠ ಮೂವತ್ತು ದಿನಗಳ ಮುಂಚೆ ಲೈಸೆನ್ಸ್ ನವೀಕರಣಕ್ಕಾಗಿ ಸಲ್ಲಿಸಿದ್ದ ಅರ್ಜಿಯು ನೀಡಿಕೆ ಪ್ರಾಧಿಕಾರಕ್ಕೆ ತಲುಪದಿದ್ದಲ್ಲಿ ದಂಡದ ರೂಪದಲ್ಲಿ ಒಂದು ನೂರು ರೂಪಾಯಿಗಳನ್ನು ಮೀರದಂತೆ ವಿನಿಯಮನಗಳ ಮೂಲಕ ನಿರ್ಧರಿಸಿದ ಹೆಚ್ಚುವರಿ ಮೊಬಲಗನ್ನು ಸಂದಾಯ ಮಾಡಿದ ಮೇಲೆ ಯಾವುದೇ ಒಂದು ಬಾರಿಗೆ ಮೂರು ವರ್ಷಗಳ ಅವಧಿಗೆ ನವೀಕರಣ ಮಾಡತಕ್ಕದ್ದು.

(4) ಈ ಪ್ರಕರಣದ ಮೇರೆಗೆ ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಯನ್ನು, ಅರ್ಜಿಯು ಲೈಸೆನ್ಸು ಜಾರಿಯಲ್ಲಿರುವುದು ನಿಂತು ಹೋಗುವುದಕ್ಕೆ ಮುಂಚೆ ನೀಡಿಕೆ ಪ್ರಾಧಿಕಾರಕ್ಕೆ ತಲುಪದಿದ್ದರೆ, ಪುರಸ್ಕರಿಸತಕ್ಕದ್ದಲ್ಲ:

ಪರಂತು, ಅನ್ಯಥಾ ಅನುಚಿತ ತೊಂದರೆಯುಂಟಾಗುವುದೆಂದು ಪ್ರಾಧಿಕಾರಕ್ಕೆ ಮನದಟ್ಟಾದರೆ, ಅರ್ಜಿದಾರನಿಂದ ಏಳುನೂರ ಐವತ್ತು ರೂಪಾಯಿಗಳ ದಂಡವನ್ನು ಪಡೆದು ಈ ಉಪಪ್ರಕರಣಕ್ಕೆ ವ್ಯತಿರಿಕ್ತವಾಗಿಯೂ ಅದು ಯಾವುದೇ ಅರ್ಜಿಯನ್ನು ಅಂಗೀಕರಿಸಬಹುದು.

(5) ಮೇಲೆ ಉಲ್ಲೇಖಿಸಲಾದ ಅನರ್ಹತೆಗಳು ಈ ಮುಂದಿನಂತಿರತಕ್ಕದ್ದು:–

(ಎ) ವ್ಯಕ್ತಿಯು ಅಪ್ರಾಪ್ತ ವಯಸ್ಕನಾಗಿರುವುದು;

(ಬಿ) ಅವನು ಅಸ್ವಸ್ಥಚಿತ್ತನೆಂದು ಸಕ್ಷಮ ಅಧಿಕಾರ ವ್ಯಾಪ್ತಿಯ ನ್ಯಾಯಾಲಯಕ್ಕೆ ಕಂಡುಬಂದಿರುವುದು;

(ಸಿ) ಅವನು ಆಪರಾಧಿಕ ದುರ್ವಿನಿಯೋಗ ಅಥವಾ ಆಪರಾಧಿಕ ನಂಬಿಕೆ ದ್ರೋಹ ಅಥವಾ ವಂಚನೆ ಅಥವಾ ಸೃಷ್ಟನೆ ಅಥವಾ ಅಂಥ ಯಾವುದೇ ಅಪರಾಧವನ್ನು ಮಾಡಲು ದುಷ್ಪ್ರೇರಣೆ ಅಥವಾ ಪ್ರಯತ್ನಿಸಿದ ಅಪರಾಧಗಳಿಗಾಗಿ ತಪ್ಪಿತಸ್ಥನೆಂದು ಸಕ್ಷಮ ಅಧಿಕಾರ ವ್ಯಾಪ್ತಿಯ ನ್ಯಾಯಾಲಯಕ್ಕೆ ಕಂಡುಬಂದಿರುವುದು:

ಪರಂತು, ಯಾವುದೇ ಅಂಥ ಅಪರಾಧದ ಸಂಬಂಧದಲ್ಲಿ ಯಾರೇ ವ್ಯಕ್ತಿಯ ಮೇಲೆ ವಿಧಿಸಲಾಗಿದ್ದ ಶಿಕ್ಷೆಯ ಅವಧಿಯು ಪೂರ್ಣಗೊಂಡು ಕನಿಷ್ಠ ಐದು ವರ್ಷಗಳು ಕಳೆದು ಹೋಗಿದ್ದಲ್ಲಿ, ಪ್ರಾಧಿಕಾರವು, ಅಂಥ ವ್ಯಕ್ತಿಯ ಸಂಬಂಧದಲ್ಲಿ ಅವನ ಅಪರಾಧ ನಿರ್ಣಯದ ಅನರ್ಹತೆಯು ಜಾರಿಯಲ್ಲಿರುವುದು ಈ ಖಂಡದ ಮೇರೆಗೆ ನಿಂತುಹೋಗಿದೆಯೆಂದು ಸಾಮಾನ್ಯವಾಗಿ ಘೋಷಿಸತಕ್ಕದ್ದು.

(ಡಿ) ಸಮಾಪನೆಗೊಳ್ಳುವ ಒಂದು ವಿಮಾ ಕಂಪನಿಯ ಯಾವುದೇ ವಿಮೆಯ ಪಾಲಿಸಿಗೆ ಸಂಬಂಧಿಸಿದ ಯಾವುದೇ ನ್ಯಾಯಿಕ ವ್ಯವಹರಣೆಯಲ್ಲಿ ಅಥವಾ ವಿಮಾಕರ್ತನ ವ್ಯವಹಾರದ ತನಿಖೆಯಲ್ಲಿ ಅವನು ಅಪ್ರಾಮಾಣಿಕವಾಗಿ ಯಾವುದೇ ಮೋಸದ ತಪ್ಪಿತಸ್ಥನಾಗಿರುವುದು ಅಥವಾ ವಿಮಾಕರ್ತ ಅಥವಾ ವಿಮಾದಾರನ ವಿರುದ್ಧ ಅಪ್ರಮಾಣಿಕ/ ಮೋಸದ ಅಥವಾ ತಪ್ಪು ನಿರೂಪಣೆಯ ತಪ್ಪಿತಸ್ಥನಾಗಿದ್ದಾನೆಂದು ಅಥವಾ ತಿಳಿದೂ ತಿಳಿದೂ ಅದರಲ್ಲಿ ಭಾಗಿಯಾಗಿದ್ದಾನೆಂದು ಅಥವಾ ಶಾಮೀಲಾಗಿದ್ದಾನೆಂದು ಕಂಡುಬಂದಿರುವುದು;

(ಇ) ಅವನು, ಪ್ರಾಧಿಕಾರವು ಈ ಸಂಬಂಧಲ್ಲಿ ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ಅಗತ್ಯ ಅರ್ಹತೆಗಳನ್ನು ಮತ್ತು ಹನ್ನೆರಡು ತಿಂಗಳನ್ನು ಮೀರದ ಅವಧಿಯ ಪ್ರಾಯೋಗಿಕ ತರಬೇತಿಯನ್ನು ಹೊಂದದಿರುವುದು;

(ಎಫ್)ಅವನು, ಈ ಸಂಬಂಧವಾಗಿ ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದದಿರುವುದು;

(ಜಿ) ಅವನು, ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದ ನೀತಿ ಸಂಹಿತೆಯನ್ನು ಉಲ್ಲಂಘಿಸಿರುವುದು.

(6) ಒಬ್ಬ ಮಧ್ಯವರ್ತಿ ಅಥವಾ ವಿಮಾ ಮಧ್ಯವರ್ತಿಯು ಹಿಂದೆ ಹೇಳಿದ ಯಾವುದೇ ಅನರ್ಹತೆಗಳಿಗೊಳಪಟ್ಟಿರುವುದು ಕಂಡುಬಂದರೆ, ಅವನು ಹೊಣೆಗಾರನಾಗಬಹುದಾದ ಯಾವುದೇ ಇತರ ದಂಡಕ್ಕೆ ಬಾಧಕವಾಗದಂತೆ, ಪ್ರಾಧಿಕಾರವು ಲೈಸೆನ್ಸನ್ನು ರದ್ದುಪಡಿಸತಕ್ಕದ್ದು ಮತ್ತು ಮಧ್ಯವರ್ತಿ ಅಥವಾ ವಿಮಾ ಮಧ್ಯವರ್ತಿಯು ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ತಿಳಿದೂ ಉಲ್ಲಂಘಿಸಿದರೆ, ಪ್ರಾಧಿಕಾರವು, ಈ ಪ್ರಕರಣದ ಮೇರೆಗೆ ಮಧ್ಯವರ್ತಿಗೆ ಅಥವಾ ವಿಮಾ ಮಧ್ಯವರ್ತಿಗೆ ನೀಡಿದ ಲೈಸೆನ್ಸನ್ನು ರದ್ದುಪಡಿಸಬಹುದು.

(7) ಪ್ರಾಧಿಕಾರವು, ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ಧರಿಸಬಹುದಾದಂಥ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಕಳೆದುಹೋದ, ನಾಶವಾದ ಅಥವಾ ವಿರೂಪವಾದ ಲೈಸೆನ್ಸಿನ ಬದಲಿಗೆ ಒಂದು ದ್ವಿಪ್ರತಿ ಲೈಸೆನ್ಸ್‌ನ್ನು ನೀಡಬಹುದು.

(8) ಈ ಪ್ರಕರಣದ ಮೇರೆಗೆ ಮಧ್ಯವರ್ತಿಯಾಗಿ ಅಥವಾ ವಿಮಾ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಲು ಲೈಸೆನ್ಸ್‌ನ್ನು ಹೊಂದದೇ ಅಂಥ ಕಾರ್ಯ ನಿರ್ವಹಿಸುವ ಯಾರೇ ವ್ಯಕ್ತಿಯು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಯಾರೇ ವಿಮಾಕರ್ತ ಅಥವಾ ಮಧ್ಯವರ್ತಿ ಅಥವಾ ವಿಮಾ ಮಧ್ಯವರ್ತಿಯಾಗಿ ನೇಮಕಗೊಳ್ಳುವ ಯಾರೇ ವ್ಯಕ್ತಿ ಅಥವಾ ಲೈಸೆನ್ಸ್ ಇಲ್ಲದೆ ಅಂಥ ಕಾರ್ಯ ನಿರ್ವಹಿಸುವಂಥ ಯಾರೇ ವ್ಯಕ್ತಿಯ ಮೂಲಕ ಭಾರತದಲ್ಲಿ ಯಾವುದೇ ವಿಮಾ ವ್ಯವಹಾರವನ್ನು ನಡೆಸುವ ಯಾರೇ ವ್ಯಕ್ತಿಯು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(9) (8)ನೇ ಉಪಪ್ರಕರಣವನ್ನು ಉಲ್ಲಂಘಿಸುವ ವ್ಯಕ್ತಿಯು ಕಂಪನಿ ಅಥವಾ ಫರ್ಮ್ ಆಗಿದ್ದಲ್ಲಿ ಆಗ, ಕಂಪನಿ ಅಥವಾ ಫರ್ಮ್‌ನ ವಿರುದ್ಧ ತೆಗೆದುಕೊಳ್ಳಬಹುದಾದ ಯಾವುದೇ ಇತರ ವ್ಯವಹರಣೆಗಳಿಗೆ ಬಾಧಕವಾಗದಂತೆ, ಅಂಥ ಉಲ್ಲಂಘನೆಯಲ್ಲಿ ಭಾಗಿಯಾದ ಕಂಪನಿಯ ಪ್ರತಿಯೊಬ್ಬ ನಿರ್ದೇಶಕನು, ವ್ಯವಸ್ಥಾಪಕನು, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯು ಮತ್ತು ಫರ್ಮಿನ ಪ್ರತಿಯೊಬ್ಬ ಪಾಲುದಾರನು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.".

30. 64ಯುಎ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ (ಎ) ಉಪಖಂಡದಲ್ಲಿ "ವಿಮಾ ನಿಯಂತ್ರಕ" ಎಂಬುದರ ಬದಲಾಗಿ "ಪ್ರಾಧಿಕಾರದ ಅಧ್ಯಕ್ಷ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

31. 64ಯುಬಿ ಪ್ರಕರಣದ,–

(ಎ) (1)ನೇ ಉಪಪ್ರಕರಣಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು:–

"(1) ಪ್ರಾಧಿಕಾರವು, ರಾಜಪತ್ರದಲ್ಲಿ, ಅಧಿಸೂಚನೆಯ ಮೂಲಕ, ಈ ಭಾಗದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ವಿನಿಯಮನಗಳನ್ನು ರಚಿಸಬಹುದು.";

(ಬಿ) (2)ನೇ ಉಪಪ್ರಕರಣದಲ್ಲಿ "ನಿಯಮಗಳು" ಎಂಬುದರ ಬದಲಾಗಿ "ವಿನಿಯಮನಗಳು" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ಸಿ) (3)ನೇ ಉಪಪ್ರಕರಣದಲ್ಲಿ "ಕೇಂದ್ರ ಸರ್ಕಾರ" ಎಂಬುದರ ಬದಲಾಗಿ ಅದು ಬರುವ ಎರಡೂ ಕಡೆಗಳಲ್ಲಿ "ಪ್ರಾಧಿಕಾರ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ಡಿ) (5)ನೇ ಉಪಪ್ರಕರಣದಲ್ಲಿ "ವಿಮಾ ನಿಯಂತ್ರಕ" ಎಂಬುದರ ಬದಲಾಗಿ "ಪ್ರಾಧಿಕಾರದ ಅಧ್ಯಕ್ಷ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

32. 64ಯುಸಿ ಪ್ರಕರಣದ (1)ನೇ ಉಪ ಪ್ರಕರಣದ ಪರಂತುಕದಲ್ಲಿ "ಕೇಂದ್ರ ಸರ್ಕಾರದ ಪೂರ್ವ ಅನುಮೋದನೆಯೊಂದಿಗೆ ನಿಯಂತ್ರಕನು" ಎಂಬುದರ ಬದಲಾಗಿ "ಪ್ರಾಧಿಕಾರವು" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

33. 64ಯುಡಿ ಪ್ರಕರಣದ (1)ನೇ ಉಪಪ್ರಕರಣದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು:–

"ಪರಂತು, ಪ್ರಾಧಿಕಾರದ ಅಧ್ಯಕ್ಷರು, ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದಿಂದ ಪರಿಣಾಮಕಾರಿಯಾಗುವಂತೆ ಸಲಹಾ ಸಮಿತಿಯ ಅಧ್ಯಕ್ಷರಾಗತಕ್ಕದ್ದು ಮತ್ತು ಹಾಗೆ ಪ್ರಕಾರ್ಯವನ್ನು ನಿರ್ವಹಿಸತಕ್ಕದ್ದು ಮತ್ತು ಅಂಥ ಪ್ರಾರಂಭಕ್ಕೆ ನಿಕಟಪೂರ್ವದಲ್ಲಿ ಅಧ್ಯಕ್ಷ ಪದವನ್ನು ಹೊಂದಿದ್ದ ಸುಂಕ ಸಮಿತಿಯ ಯಾರೇ ಅಧ್ಯಕ್ಷನು ಹಾಗೆ ಅಧ್ಯಕ್ಷರಾಗಿರುವುದು ನಿಂತುಹೋಗತಕ್ಕದ್ದು.".

34. 64ಯುಜೆ ಪ್ರಕರಣದ (5)ನೇ ಉಪ ಪ್ರಕರಣದಲ್ಲಿ, "ಕೇಂದ್ರ ಸರ್ಕಾರ" ಎಂಬುದಕ್ಕೆ ಬದಲಾಗಿ ಅದು ಬರುವ ಕಡೆಯಲ್ಲೆಲ್ಲ "ಪ್ರಾಧಿಕಾರ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

35. 64ಯುಎಂ ಪ್ರಕರಣದ,–

(ಎ) (1)ನೇ ಉಪಪ್ರಕರಣದಲ್ಲಿ,–

(i) (ಬಿ) ಪ್ಯಾರಾಗ್ರಾಫ್‌ನಲ್ಲಿ, "ವಿಮಾ (ತಿದ್ದುಪಡಿ) ಅಧಿನಿಯಮ, 1968"ರ ನಂತರ, "ಆದರೆ ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭಕ್ಕೆ ಮುಂಚೆ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ii) (ಬಿ) ಪ್ಯಾರಾಗ್ರಾಫ್ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:–

"(ಬಿಎ) ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದಿಂದ ಒಂದು ವರ್ಷದ ಅವಧಿಯು ಮುಕ್ತಾಯವಾದ ನಂತರ ಸರ್ವೇಯರ್ ಆಗಿ ಅಥವಾ ನಷ್ಟ ನಿರ್ಧಾರಕನಾಗಿ ಕಾರ್ಯನಿರ್ವಹಿಸಲು ಇಚ್ಛಿಸುವ ಪ್ರತಿಯೊಬ್ಬ ವ್ಯಕ್ತಿಯು ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ಧರಿಸಬಹುದಾದಂಥ ಕಾಲದಲ್ಲಿ, ಅಂಥ ರೀತಿಯಲ್ಲಿ ಮತ್ತು ಅಂಥ ಶುಲ್ಕವನ್ನು ಸಂದಾಯ ಮಾಡಿದ ಮೇಲೆ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸತಕ್ಕದ್ದು:

ಪರಂತು, ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭಕ್ಕೆ ನಿಕಟ ಪೂರ್ವದಲ್ಲಿ ನೀಡಿದ ಯಾವುದೇ ಲೈಸೆನ್ಸ್‌ನ್ನು, ಅಂಥ ಲೈಸೆನ್ಸ್‌ನ್ನು ನೀಡಲು ಉಪಬಂಧಿಸಿರುವ ವಿನಿಯಮನಗಳ ಅನುಸಾರವಾಗಿ ನೀಡಲಾಗಿದೆಯೆಂಬುದಾಗಿ ಭಾವಿಸತಕ್ಕದ್ದು.";

(iii) (ಸಿ) ಪ್ಯಾರಾಗ್ರಾಫ್‌ನಲ್ಲಿ, "ನಿಯಮಿಸಬಹುದಾದಂತೆ" ಎಂಬುದರ ಬದಲಾಗಿ "ವಿನಿಯಮನಗಳ ಮೂಲಕ ನಿರ್ಧರಿಸಬಹುದಾದಂತೆ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(iv) (ಡಿ) ಪ್ಯಾರಾಗ್ರಾಫ್‌ನ (i)ನೇ ಖಂಡದಲ್ಲಿ,–

(ಎ) (ಎ) ಬಾಬಿನ ಬದಲಾಗಿ, ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು:–

"(ಎ) ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದ ದಿನಾಂಕದಂದು ಸರ್ವೇಯರನಾಗಿ ಅಥವಾ ನಷ್ಟ ನಿರ್ಧಾರಕನಾಗಿ ವೃತ್ತಿಯಲ್ಲಿರುವ, ಅಥವಾ";

(ಬಿ) (ಎಫ್) ಬಾಬಿನಲ್ಲಿ, "ನಿಯಮಿಸಲಾದುದು" ಎಂಬುದಕ್ಕೆ ಬದಲಾಗಿ "ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಲಾದುದು" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ಬಿ) (1)ನೇ ಉಪಪ್ರಕರಣದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು,–

"(1ಎ) ಪ್ರತಿಯೊಬ್ಬ ಸರ್ವೇಯರನು ಮತ್ತು ನಷ್ಟ ನಿರ್ಧಾರಕನು ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಅವರ ಕರ್ತವ್ಯಗಳ, ಜವಾಬ್ದಾರಿಗಳ ಮತ್ತು ಇತರ ವೃತ್ತೀಯ ಅಗತ್ಯತೆಗಳ ಸಂಬಂಧದಲ್ಲಿ ನೀತಿ ಸಂಹಿತೆಯನ್ನು ಪಾಲಿಸತಕ್ಕದ್ದು.".

36. 64ವಿ ಪ್ರಕರಣದ,–

(ಎ) (1)ನೇ ಉಪಪ್ರಕರಣದಲ್ಲಿ,–

(i) (i)ನೇ ಖಂಡದಲ್ಲಿ, (ಜಿ) ಉಪಖಂಡದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:–

"(ಹೆಚ್) ಈ ಸಂಬಂಧದಲ್ಲಿ ರಚಿಸಲಾದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಆಸ್ತಿ ಅಥವಾ ಆಸ್ತಿಗಳು;";

(ii) (ii)ನೇ ಖಂಡದಲ್ಲಿ,–

(ಎ) (ಬಿ) ಉಪಖಂಡದಲ್ಲಿ (i)ನೇ ಮತ್ತು (ii)ನೇ ಬಾಬಿನಲ್ಲಿ "ಶೇಕಡಾ 40" ಎಂಬುದಕ್ಕೆ ಬದಲಾಗಿ "ಶೇಕಡಾ 50" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ಬಿ) (ಎಫ್) ಉಪಖಂಡದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:–

"(ಜಿ) ಈ ಸಂಬಂಧದಲ್ಲಿ ಮಾಡಬಹುದಾದಂಥ ಇತರ ಹೊಣೆಗಾರಿಕೆ ಯನ್ನು (ii)ನೇ ಖಂಡದ ಉದ್ದೇಶಕ್ಕಾಗಿ ಸೇರಿಸತಕ್ಕದ್ದು;";

(ಬಿ) (2)ನೇ ಉಪಪ್ರಕರಣಕ್ಕೆ ಬದಲಾಗಿ, ಈ ಮುಂದಿನದನ್ನು ಸೇರಿಸತಕ್ಕದ್ದು:–

"(2) ಪ್ರತಿಯೊಬ್ಬ ವಿಮಾಕರ್ತನು, ಸಂದರ್ಭಾನುಸಾರ, 15ನೇ ಪ್ರಕರಣ ಅಥವಾ 16ನೇ ಪ್ರಕರಣದ ಮೇರೆಗೆ ಅವನ ಸಾಮಾನ್ಯ ವಿಮಾ ವ್ಯವಹಾರದ ಸಂಬಂಧದಲ್ಲಿ ಪ್ರಾಧಿಕಾರವು ಅನುಮೋದಿಸಿದ ಲೆಕ್ಕಪರಿಶೋಧಕನಿಂದ ಅಥವಾ ಜೀವ ವಿಮಾ ವ್ಯವಹಾರದ ಸಂಬಂಧದಲ್ಲಿ ಪ್ರಾಧಿಕಾರವು ಅನುಮೋದಿಸಿದ ವಿಮಾ ಗಣಕನಿಂದ ಸಂದರ್ಭಾನುಸಾರವಾಗಿ, ಈ ಪ್ರಕರಣದ ಮೂಲಕ ಅಗತ್ಯಪಡಿಸಿದ ರೀತಿಯಲ್ಲಿ ನಿರ್ಧರಿಸಲಾದ ಅವನ ಆಸ್ತಿಗಳು ಮತ್ತು ಹೊಣೆಗಳ ಪ್ರಮಾಣೀಕೃತ ವಿವರಪಟ್ಟಿಕೆಗಳನ್ನು ಹಿಂದಿನ ವರ್ಷದ ಮಾರ್ಚ್, 31ನೇ ದಿನದಂದು ಇದ್ದಂತೆ ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು.

(3) ಪ್ರತಿಯೊಬ್ಬ ವಿಮಾಕರ್ತನು, ಈ ಪ್ರಕರಣದ ಮೂಲಕ ಅಗತ್ಯಪಡಿಸಿದ ರೀತಿಯಲ್ಲಿ ಮತ್ತು ಈ ಸಂಬಂಧವಾಗಿ ಪ್ರಾಧಿಕಾರವು ರಚಿಸಬಹುದಾದಂಥ ವಿನಿಯಮನಗಳ ಅನುಸಾರವಾಗಿ ಅವನ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಮೌಲ್ಯನಿರ್ಣಯವನ್ನು ಮಾಡತಕ್ಕದ್ದು.".

37. 64 ವಿಎ ಪ್ರಕರಣದ,–

(ಎ) (1)ನೇ ಉಪಪ್ರಕರಣದಲ್ಲಿ, "ಎಲ್ಲಾ ಕಾಲಗಳಲ್ಲಿಯೂ" ಎಂಬುದರ ಬದಲಾಗಿ "ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭಕ್ಕೆ ಮುಂಚೆ ಎಲ್ಲಾ ಕಾಲಗಳಲ್ಲಿ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ಬಿ) (1)ನೇ ಉಪಪ್ರಕರಣದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:–

"(1ಎ) ಪ್ರತಿಯೊಬ್ಬ ವಿಮಾಕರ್ತನು, ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದಂದು ಅಥವಾ ನಂತರ, ಎಲ್ಲಾ ಕಾಲಗಳಲ್ಲಿಯೂ, ಈ ಮುಂದಿನಂತೆ ಲೆಕ್ಕಹಾಕಲಾದ ಮೊಬಲಗಿಗಿಂತ ಕಡಿಮೆಯಿಲ್ಲದಂತೆ (ಈ ಪ್ರಕರಣದಲ್ಲಿ ಇನ್ನು ಮುಂದೆ "ಅಗತ್ಯಪಡಿಸಿದ ಧನಾನುಕೂಲತೆ ಕನಿಷ್ಠ ಮಿತಿ" ಎಂದು ಉಲ್ಲೇಖಿಸಲಾಗಿದೆ) ಅವನ ಹೊಣೆಗಾರಿಕೆಗಳ ಮೊಬಲಗಿಗೂ ಮೇಲ್ಪಟ್ಟು ಅವನ ಆಸ್ತಿಗಳ ಮೌಲ್ಯದ ಹೆಚ್ಚುವರಿ ಮೊಬಲಗನ್ನು ಇಟ್ಟುಕೊಂಡುಬರತಕ್ಕದ್ದು, ಎಂದರೆ:–

(i) ಜೀವ ವಿಮಾ ವ್ಯವಹಾರವನ್ನು ನಡೆಸುತ್ತಿರುವ ವಿಮಾಕರ್ತನ ಸಂದರ್ಭದಲ್ಲಿ, ಅಗತ್ಯಪಡಿಸಿದ ಧನಾನುಕೂಲತೆ ಕನಿಷ್ಠ ಮಿತಿಯು ಈ ಮುಂದಿನ ಮೊಬಲಗುಗಳಿಗಿಂತಲೂ ಹೆಚ್ಚಿಗೆ ಇರತಕ್ಕದ್ದು,–

(ಎ) ಐವತ್ತು ಕೋಟಿ ರೂಪಾಯಿಗಳು (ಮರು ವಿಮಾಕರ್ತರ ಸಂದರ್ಭದಲ್ಲಿ ಒಂದು ನೂರು ಕೋಟಿ ರೂಪಾಯಿಗಳು); ಅಥವಾ

(ಬಿ) ಈ ಕೆಳಗೆ ಹೇಳಿರುವ (i)ನೇ ಮತ್ತು (ii)ನೇ ಬಾಬುಗಳ ಲೆಕ್ಕಹಾಕಿದಾಗ ಬಂದ ಒಟ್ಟು ಮೊತ್ತಗಳು:–

(1) ಕೆಳಗಿನ (ಹಂತ I) (ಎ) ಬಾಬಿನಲ್ಲಿ ವಿವರಿಸಿರುವಂತೆ ಲೆಕ್ಕ ಹಾಕಿದಾಗ ಬಂದ ಮತ್ತು (ಹಂತ II) (ಬಿ) ಬಾಬಿನಲ್ಲಿ ವಿವರಿಸಿರುವಂತೆ ಲೆಕ್ಕಹಾಕಿದಾಗ ಬಂದ ಒಟ್ಟು ಮೊತ್ತ:

(ಎ) Iನೇ ಹಂತಕ್ಕಾಗಿ,–

(ಎ.1) ನೇರ ವ್ಯವಹಾರಕ್ಕಾಗಿ ಮತ್ತು ಮರು ವಿಮೆಗೆ ಬಿಟ್ಟುಕೊಡುವುದಕ್ಕಾಗಿ ಯಾವುದೇ ಕಡಿತ ಮಾಡದೆ ಮರು ವಿಮಾ ಒಪ್ಪಿಗೆಗಳಿಗಾಗಿ ಖಚಿತವಾದ ಮೀಸಲು ಹಣದ ಶೇಕಡಾ ಐದನ್ನು ಮೀರದಂತೆ ವಿನಿಯಮನಗಳ ಮೂಲಕ ನಿರ್ಧರಿಸಿದ ಶೇಕಡಾವಾರಿಗೆ ಸಮಾನವಾದ ಮೊತ್ತವನ್ನು ತೆಗೆದುಕೊಳ್ಳತಕ್ಕದ್ದು;

(ಎ.2) ಮರು ವಿಮೆಗೆ ಬಿಟ್ಟುಕೊಡುವುದಕ್ಕಾಗಿ ಕಡಿತ ಮಾಡಿದ ನಂತರ ಹಿಂದಿನ ಹಣಕಾಸು ವರ್ಷದ ಕೊನೆಯಲ್ಲಿನ ಖಚಿತವಾದ ಮೀಸಲು ಹಣದ ಮೊಬಲಗನ್ನು ಅಂಥ ಯಾವುದೇ ಕಡಿತವನ್ನು ಮಾಡುವ ಮುಂಚೆ, ಖಚಿತವಾದ ಮೀಸಲು ಹಣದ ಮೊಬಲಗಿನ ಶೇಕಡಾವಾರು ಎಂದು ವ್ಯಕ್ತಪಡಿಸತಕ್ಕದ್ದು; ಮತ್ತು

(ಎ.3) ಮೇಲಿನ (ಎ–1) ಬಾಬಿನಲ್ಲಿ ಸೂಚಿಸಿರುವ ಮೊತ್ತವನ್ನು,–

(ಎ.3.1) ಮೇಲಿನ (ಎ.2) ಬಾಬಿನ ಮೇರೆಗೆ ಲೆಕ್ಕಹಾಕಿದಾಗ ಬಂದ ಶೇಕಡಾವಾರು, ಶೇಕಡಾ ಎಂಬತ್ತೈದಕ್ಕಿಂತ ಹೆಚ್ಚಾಗಿದ್ದರೆ (ಅಥವಾ ಮರು ವಿಮಾ ವ್ಯವಹಾರವನ್ನು ಮಾತ್ರ ಮಾಡುತ್ತಿರುವ ಮರು ವಿಮಾಕರ್ತನ ಸಂದರ್ಭದಲ್ಲಿ ಶೇಕಡಾ ಐವತ್ತು) ಆ ಹೆಚ್ಚಾದ ಶೇಕಡಾವಾರಿನಿಂದ; ಮತ್ತು

(ಎ.3.2) ಯಾವುದೇ ಇತರೆ ಸಂದರ್ಭದಲ್ಲಿ, ಶೇಕಡಾ ಎಂಬತ್ತೈದರಿಂದ (ಅಥವಾ ಮರು ವಿಮಾ ವ್ಯವಹಾರವನ್ನು ಮಾತ್ರ ಮಾಡುತ್ತಿರುವ ಮರು ವಿಮಾಕರ್ತನ ಸಂದರ್ಭದಲ್ಲಿ ಶೇಕಡ ಐವತ್ತು)

– ಗುಣಿಸತಕ್ಕದ್ದು.

(ಬಿ) IIನೇ ಹಂತಕ್ಕಾಗಿ,–

(ಬಿ.1) ಪಾಲಿಸಿಗಳ ಮೇಲಿನ ಅಪಾಯ ಆಧಾರಿತ ಮೊತ್ತವು ನಕಾರಾತ್ಮಕ ಅಂಕಿಯಾಗಿರದಿದ್ದಲ್ಲಿ ಅವುಗಳ ಅಪಾಯ ಆಧಾರಿತ ಮೊತ್ತದ ಶೇ. ಒಂದನ್ನು ಮೀರದಂತೆ ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ಧರಿಸಿದ ಶೇಕಡಾವಾರಿಗೆ ಸಮನಾದ ಮೊತ್ತವನ್ನು ತೆಗೆದುಕೊಳ್ಳತಕ್ಕದ್ದು; ಮತ್ತು

(ಬಿ.2) ಮರು ವಿಮೆಗೆ ಬಿಟ್ಟುಕೊಟ್ಟಿರುವುದನ್ನು ಕಡಿತ ಮಾಡಿದ ನಂತರ, ಅಪಾಯ ಆಧಾರಿತ ಮೊತ್ತವು ನಕಾರಾತ್ಮಕ ಅಂಕಿಯಾಗಿರದಿದ್ದಲ್ಲಿ ಪಾಲಿಸಿಗಳ ಹಿಂದಿನ ಹಣಕಾಸು ವರ್ಷದ ಕೊನೆಯಲ್ಲಿ ಅಪಾಯ ಆಧಾರಿತ ಮೊತ್ತವನ್ನು ಅಂಥ ಯಾವುದೇ ಕಡಿತದ ಮುಂಚೆ ಅಪಾಯ ಆಧಾರಿತ ಮೊತ್ತದ ಶೇಕಡಾವಾರೆಂದು ವ್ಯಕ್ತಪಡಿಸತಕ್ಕದ್ದು; ಮತ್ತು

(ಬಿ.3) ಮೇಲಿನ (ಬಿ.1) ಬಾಬಿನ ಮೇರೆಗೆ ಲೆಕ್ಕಹಾಕಲಾದ ಮೊತ್ತವನ್ನು,–

(ಬಿ.3.1) ಮೇಲಿನ (ಬಿ.2) ಬಾಬಿನ ಮೇರೆಗೆ ಲೆಕ್ಕಹಾಕಿದಾಗ ಬಂದ ಶೇಕಡಾವಾರು ಶೇಕಡಾ ಐವತ್ತಕ್ಕಿಂತ ಹೆಚ್ಚಿದ್ದರೆ, ಆ ಹೆಚ್ಚಿನ ಶೇಕಡಾವಾರಿನಿಂದ; ಮತ್ತು

(ಬಿ.3.2) ಯಾವುದೇ ಇತರ ಸಂದರ್ಭದಲ್ಲಿ ಶೇಕಡಾ ಐವತ್ತರಿಂದ;

– ಗುಣಿಸತಕ್ಕದ್ದು.

(II) 64ವಿ ಪ್ರಕರಣದ ಉಪಬಂಧಗಳ ಅನುಸಾರವಾಗಿ ನಿರ್ಧರಿಸಲಾದ ಆಸ್ತಿಗಳ ಮೌಲ್ಯದ ಮೇಲೆ ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ಧರಿಸಿದ ಶೇಕಡವಾರು;

(ii) ಸಾಮಾನ್ಯ ವಿಮಾ ವ್ಯವಹಾರವನ್ನು ನಡೆಸುತ್ತಿರುವ ವಿಮಾಕರ್ತನ ಸಂದರ್ಭದಲ್ಲಿ; ಅಗತ್ಯಪಡಿಸಲಾದ ಧನಾನುಕೂಲತೆ ಕನಿಷ್ಠ ಮಿತಿಯು ಈ ಮುಂದಿನ ಮೊಬಲಗುಗಳಿಗಿಂತ, ಎಂದರೆ:–

ವಾಸ್ತವವಾಗಿರುವ ಆದರೆ ಶೇಕಡಾವಾರು, ನಿವ್ವಳ ಪ್ರಿಮಿಯಂಗಳನ್ನು ಮತ್ತು ನಿವ್ವಳ ಭರಿಸಿದ ಕ್ಲೇಮುಗಳನ್ನು ಲೆಕ್ಕಹಾಕುವಲ್ಲಿ ಮರು ವಿಮೆಗಾಗಿ ವಿನಿಯಮನಗಳ ಮೂಲಕ ನಿರ್ಧರಿಸಿದ ಶೇಕಡಾ ಐವತ್ತನ್ನು ಮೀರದಂತೆ ಜಮೆ ಮಾಡುವುದಕ್ಕೆ ಒಳಪಟ್ಟು,–

(ಎ) ಐವತ್ತು ಕೋಟಿ ರೂಪಾಯಿಗಳು (ಮರು ವಿಮಾಕರ್ತನ ಸಂದರ್ಭದಲ್ಲಿ ಒಂದುನೂರು ಕೋಟಿ ರೂಪಾಯಿಗಳು); ಅಥವಾ

(ಬಿ) ನಿವ್ವಳ ಪ್ರೀಮಿಯಂ ಆದಾಯದ ಶೇಕಡಾ ಇಪ್ಪತ್ತಕ್ಕೆ ಸಮನಾದ ಮೊತ್ತ; ಅಥವಾ

(ಸಿ) ನಿವ್ವಳ ಭರಿಸಿದ ಕ್ಲೇಮುಗಳ ಶೇಕಡಾ ಮೂವತ್ತಕ್ಕೆ ಸಮನಾದ ಮೊತ್ತ

– ಇವುಗಳಲ್ಲಿ ಅತ್ಯಂತ ಹೆಚ್ಚಿನದು:

ಪರಂತು, ಯಾರೇ ವಿಮಾಕರ್ತನ ಸಂಬಂಧದಲ್ಲಿ, ಪ್ರಾಧಿಕಾರವು, ಅನಾನುಕೂಲ ಕ್ಲೇಮಿನ ಅನುಭವದ ಕಾರಣದಿಂದಾಗಲೀ ಅಥವಾ ವ್ಯವಹಾರದ ಪರಿಮಾಣದಲ್ಲಿ ತೀವ್ರ ಹೆಚ್ಚಳದ ಕಾರಣದಿಂದಾಗಲಿ ಅಥವಾ ಯಾವುದೇ ಇತರ ಕಾರಣದಿಂದಾಗಲಿ ಈ ಉಪ ಪ್ರಕರಣದ ಉಪಬಂಧಗಳನ್ನು ಪಾಲಿಸಲು ವಿಮಾಕರ್ತನಿಗೆ ಅನುಚಿತ ಕಷ್ಟ ಉಂಟಾಗುವುದೆಂದು ಪ್ರಾಧಿಕಾರಕ್ಕೆ ಮನದಟ್ಟಾದರೆ, ಅಂಥ ಅವಧಿಗಾಗಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು, ಮೇಲಿನ (i)ನೇ ಉಪಖಂಡ ಅಥವಾ ಸಂದರ್ಭಾನುಸಾರವಾಗಿ (ii)ನೇ ಉಪಖಂಡದಲ್ಲಿ ಸೂಚಿಸಿರುವ ಮೊಬಲಗಿಗಿಂತ ಕಡಿಮೆ ಇಲ್ಲದಂತೆ ಅಂಥ ಧನಾನುಕೂಲತೆಯ ಕನಿಷ್ಠ ಮಿತಿಗಾಗಿ ನಿರ್ದೇಶಿಸಬಹುದು.

**ವಿವರಣೆ**:– ಈ ಉಪ–ಪ್ರಕರಣದ ಉದ್ದೇಶಗಳಿಗಾಗಿ,–

(i) 'ಗಣಿತ ರೀತ್ಯಾ ಮೀಸಲು' ಎಂದರೆ, ಜೀವವಿಮಾ ವ್ಯವಹಾರದ ಪಾಲಿಸಿಗಳ ಅಥವಾ ಕರಾರುಗಳ ಮೇರೆಗೆ ಅಥವಾ ಆ ಪಾಲಿಸಿಗಳಿಗೆ ಅಥವಾ ಕರಾರುಗಳಿಗೆ ಸಂಬಂಧಿಸಿದಂತೆ ಉದ್ಭವಿಸುವ ಹೊಣೆಗಾರಿಕೆಗಳನ್ನು (ಆದರೆ, ಈಡೇರಿಸಬೇಕಾಗಿರುವ ಹೊಣೆಗಾರಿಕೆಗಳನ್ನು ಮತ್ತು ಯಾವ ಪಾಲಿಸಿಯ ಮೂಲಕ ಮರುವಿಮಾಕರ್ತನು ಸಿಡೆಂಟ್ ಬಳಿ ಒಂದು ಮೊತ್ತವನ್ನು ಜಮಾ ಮಾಡಿರುವನೋ ಆ ಪಾಲಿಸಿಗೆ ಸಂಬಂಧಿಸಿದಂತೆ ಜಮಾ ಹಣ ವಾಪಸಾತಿ ಒಡಂಬಡಿಕೆಯಿಂದ ಉದ್ಭವಿಸುವ ಹೊಣೆಗಾರಿಕೆಗಳನ್ನು ಬಿಟ್ಟು) ಈಡೇರಿಸಲು ವಿಮಾಕರ್ತನು ಮಾಡಿದ ಏರ್ಪಾಟು, ಗಣಿತ ರೀತ್ಯಾ ಮೀಸಲಿನಲ್ಲಿ, ಮರಣ ಪ್ರಮಾಣಗಳು ಮತ್ತು ರೋಗಹಂಚಿಕೆ ಪ್ರಮಾಣಗಳು, ಬಡ್ಡಿ ದರಗಳು ಮತ್ತು ವೆಚ್ಚದ ಪ್ರಮಾಣಗಳು ಮುಂತಾದ, ಆಧಾರವಾಗಿಟ್ಟುಕೊಂಡಿರುವ, ಸಂಖ್ಯೆಗಳಲ್ಲಿ ಆಗುವ ಪ್ರತಿಕೂಲ ವಿಚಲನೆಗಳಿಗಾಗಿ ಕಲ್ಪಿಸಿರುವ ನಿರ್ದಿಷ್ಟ ಅವಕಾಶ ಮತ್ತು ಈ ಉದ್ದೇಶಕ್ಕಾಗಿ ಪ್ರಾಧಿಕಾರವು ರಚಿಸಿರುವ ವಿನಿಯಮಗಳಿಗೆ ಅನುಸಾರವಾಗಿ, ಹೊಣೆಗಾರಿಕೆಗಳ ಮೌಲ್ಯೀಕರಣದಲ್ಲಿ ಕಲ್ಪಿಸಿರುವ ಸ್ಪಷ್ಟ ಅವಕಾಶ ಸಹ ಒಳಗೊಳ್ಳುತ್ತದೆ;

(ii) "ಭರಿಸಿದ ನಿವ್ವಳ ಕ್ಲೇಮುಗಳು" ಎಂದರೆ ಹಿಂದಿನ ಮೂರು ಹಣಕಾಸು ವರ್ಷಗಳನ್ನು ಮೀರದಂತೆ ನಿರ್ದಿಷ್ಟ ಅವಧಿಯಲ್ಲಿ ಭರಿಸಿದ ನಿವ್ವಳ ಕ್ಲೇಮುಗಳ ಸರಾಸರಿ ಎಂದು ಅರ್ಥ;

(iii) ಜೀವ ವಿಮಾ ಪಾಲಿಸಿಗೆ ಸಂಬಂಧಿಸಿದಂತೆ "ಅಪಾಯ ಆಧಾರಿತ ಮೊತ್ತ" ಎಂದರೆ,–

(ಎ) ಈ ಕೆಳಗಿನ (ಬಿ) ಉಪಖಂಡದೊಳಗೆ ಬರುವ ಸಂದರ್ಭವನ್ನು ಹೊರತುಪಡಿಸಿ, ಮರಣದ ಪರಿಣಾಮವಾಗಿ ಮೊಬಲಗನ್ನು ಸಂದಾಯ ಮಾಡಬೇಕಾದ ಯಾವುದೇ ಸಂದರ್ಭದಲ್ಲಿ, ಮರಣದ ನಂತರ ಸಂದಾಯ ಮಾಡಬೇಕಾದ ಮೊಬಲಗನ್ನು; ಮತ್ತು

(ಬಿ) ಮರಣದ ಪರಿಣಾಮವಾಗಿ ಪ್ರಶ್ನಿತ ಪಾಲಿಸಿ ಮೇರೆಗೆ ಯಾವ ಸಂದರ್ಭದಲ್ಲಿ, ಸೌಲಭ್ಯವು ವಾರ್ಷಿಕ ಕಂತಿನ ಸಂದಾಯಗಳನ್ನು ಕಂತುಗಳ ಮೂಲಕ ಮೊತ್ತದ ಸಂದಾಯ ಅಥವಾ ಯಾವುದೇ ಇತರ ಬಗೆಯ ನಿಯತಕಾಲಿಕ ಸಂದಾಯಗಳನ್ನು ಮಾಡುವುದನ್ನು ಒಳಗೊಂಡಿರುವ, ಆ ಯಾವುದೇ ಸಂದರ್ಭದಲ್ಲಿ ಆ ಸೌಲಭ್ಯದ ಪ್ರಸ್ತುತ ಮೌಲ್ಯವನ್ನು

– ಈ ಎರಡು ಸಂದರ್ಭಗಳಲ್ಲಿ ಸಂಬಂಧಪಟ್ಟ ಪಾಲಿಸಿಗಳ ಸಂಬಂಧದಲ್ಲಿ ಗಣಿತ ರೀತ್ಯಾ ಮೀಸಲು ಹಣದಲ್ಲಿ ಕಳೆದ ಮೊತ್ತ ಎಂದು ಅರ್ಥ.

(ಸಿ) (2)ನೇ ಉಪಪ್ರಕರಣದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:–

"(2ಎ) ಯಾವುದೇ ಕಾಲದಲ್ಲಿ, ಈ ಪ್ರಕರಣದ ಉಪಬಂಧಗಳ ಅನುಸಾರವಾಗಿ ಅಗತ್ಯಪಡಿಸಿದ ಧನಾನುಕೂಲತೆಯ ಕನಿಷ್ಠ ಮಿತಿಯನ್ನು ವಿಮಾಕರ್ತನು ಇಟ್ಟುಕೊಂಡು ಬರದಿದ್ದರೆ ಅವನು ಪ್ರಾಧಿಕಾರವು ನೀಡಿದ ನಿರ್ದೇಶನಗಳ ಅನುಸಾರವಾಗಿ, ಕೊರತೆಯನ್ನು ಸರಿದೂಗಿಸುವುದಕ್ಕೆ ಹಾಕಿಕೊಂಡಿರುವ ಕ್ರಿಯಾಯೋಜನೆಯನ್ನು ಸೂಚಿಸಿ ಮೂರು ತಿಂಗಳಿಗೆ ಮೀರದಂತೆ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಪ್ರಾಧಿಕಾರಕ್ಕೆ ಹಣಕಾಸು ಯೋಜನೆಯನ್ನು ಸಲ್ಲಿಸತಕ್ಕದ್ದು.

(2ಬಿ) (2ಎ) ಉಪಪ್ರಕರಣದ ಮೇರೆಗೆ ಪ್ರಾಧಿಕಾರಕ್ಕೆ ಆ ಯೋಜನೆಯನ್ನು ಸಲ್ಲಿಸಿದ ವಿಮಾಕರ್ತನು, ಪ್ರಾಧಿಕಾರವು ಅದು ಅಸಮರ್ಪಕವೆಂದು ಪರಿಗಣಿಸಿದರೆ ಆ ಯೋಜನೆಗೆ ಮಾರ್ಪಾಟುಗಳನ್ನು ಪ್ರಸ್ತಾಪಿಸತಕ್ಕದ್ದು, ಮತ್ತು ಪ್ರಾಧಿಕಾರವು ಸಮರ್ಪಕವೆಂದು ಅಂಗೀಕರಿಸಿದ ಯಾವುದೇ ಯೋಜನೆಯನ್ನು ಜಾರಿಗೊಳಿಸತಕ್ಕದ್ದು;

(2ಸಿ) (2ಎ) ಉಪಪ್ರಕರಣದ ಉಪಬಂಧಗಳನ್ನು ಪಾಲಿಸದ ವಿಮಾಕರ್ತನನ್ನು ದಿವಾಳಿ ಎಂದು ಭಾವಿಸತಕ್ಕದ್ದು ಮತ್ತು ನ್ಯಾಯಾಲಯವು ಪರಿಸಮಾಪನಗೊಳಿಸಬಹುದು.";

(ಡಿ) (6)ನೇ ಉಪ–ಪ್ರಕರಣದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು:–

"(7) ಪ್ರತಿಯೊಬ್ಬ ವಿಮಾಕರ್ತನು 15ನೇ ಪ್ರಕರಣ ಅಥವಾ ಸಂದರ್ಭಾನುಸಾರವಾಗಿ 16ನೇ ಪ್ರಕರಣದ ಮೇರೆಗೆ ತನ್ನ ವಿವರ ಪಟ್ಟಿಕೆಗಳನ್ನು, ಜೀವ ವಿಮಾ ವ್ಯವಹಾರದ ಸಂದರ್ಭದಲ್ಲಿ ಪ್ರಾಧಿಕಾರವು ಅನುಮೋದಿಸಿದ ವಿಮಾ ಗಣಕನಿಂದ ಪ್ರಮಾಣೀಕರಿಸಿದ ತಃಖ್ತೆಯನ್ನು, ಮತ್ತು ಸಾಮಾನ್ಯ ವಿಮಾ ವ್ಯವಹಾರದ ಸಂದರ್ಭದಲ್ಲಿ (1ಎ) ಉಪಪ್ರಕರಣದ ಮೂಲಕ ಅಗತ್ಯಪಡಿಸಿದ ರೀತಿಯಲ್ಲಿ ವಿಮಾಕರ್ತನು ಇಟ್ಟುಕೊಂಡು ಬಂದ ಅಗತ್ಯ ಧನಾನುಕೂಲತೆಯ ಕನಿಷ್ಠ ಮಿತಿಯ ಬಗ್ಗೆ ಪ್ರಾಧಿಕಾರವು ಅನುಮೋದಿಸಿದ, ಲೆಕ್ಕಪರಿಶೋಧಕನು ಪ್ರಮಾಣೀಕರಿಸಿದ ತಃಖ್ತೆಯನ್ನು, ಪ್ರಾಧಿಕಾರಕ್ಕೆ ಒದಗಿಸತಕ್ಕದ್ದು".

38. 70ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ "ನಿಯಂತ್ರಕನಿಂದ ನೋಂದಣಿ ಪ್ರಮಾಣಪತ್ರ" ಎಂಬುದಕ್ಕೆ ಬದಲಾಗಿ "ಪ್ರಾಧಿಕಾರದಿಂದ, ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದ ದಿನಾಂಕಕ್ಕೆ ಮುಂಚೆ ನೋಂದಣಿ ಪ್ರಮಾಣ ಪತ್ರ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.".

39. 95ನೇ ಪ್ರಕರಣದ, (1)ನೇ ಉಪ ಪ್ರಕರಣದಲ್ಲಿ "ಈ ಭಾಗದಲ್ಲಿ" ಎಂಬುದಕ್ಕೆ ಬದಲಾಗಿ "ಈ ಭಾಗದಲ್ಲಿ ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದ ದಿನಾಂಕಕ್ಕೆ ಮುಂಚೆ –" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

40. 101ಎ ಪ್ರಕರಣದ,–

(ಎ) (1)ನೇ ಉಪಪ್ರಕರಣದಲ್ಲಿ, "ಕೇಂದ್ರ ಸರ್ಕಾರ" ಎಂಬುದಕ್ಕೆ ಬದಲಾಗಿ "ಕೇಂದ್ರ ಸರ್ಕಾರದ ಪೂರ್ವ ಅನುಮೋದನೆಯೊಂದಿಗೆ, ಪ್ರಾಧಿಕಾರ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ಬಿ) (2)ನೇ ಉಪಪ್ರಕರಣದಲ್ಲಿ, "ಕೇಂದ್ರ ಸರ್ಕಾರ" ಎಂಬುದರ ಬದಲಾಗಿ "ಪ್ರಾಧಿಕಾರ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

41. 101ಬಿ ಪ್ರಕರಣದ,–

(ಎ) (1)ನೇ ಉಪಪ್ರಕರಣದಲ್ಲಿ "ಕೇಂದ್ರ ಸರ್ಕಾರ" ಎಂಬುದಕ್ಕೆ ಬದಲಾಗಿ "ಕೇಂದ್ರ ಸರ್ಕಾರದ ಪೂರ್ವ ಅನುಮೋದನೆಯೊಂದಿಗೆ, ಪ್ರಾಧಿಕಾರ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು;

(ಬಿ) (2)ನೇ ಉಪಪ್ರಕರಣದಲ್ಲಿ, "ನಿಯಮಿಸಲಾದುದು" ಎಂಬುದಕ್ಕೆ ಬದಲಾಗಿ "ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ಧರಿಸಲಾದುದು" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

42. 102 ರಿಂದ 105ರವರೆಗಿನ ಪ್ರಕರಣಗಳ ಬದಲಾಗಿ ಈ ಮುಂದಿನದನ್ನು ಸೇರಿಸತಕ್ಕದ್ದು:–

**"102. ಈ ಅಧಿನಿಯಮವನ್ನು ಪಾಲಿಸಲು ತಪ್ಪಿದ್ದಕ್ಕಾಗಿ ಅಥವಾ ಅದನ್ನು ಉಲ್ಲಂಘಿಸಿ ಕಾರ್ಯ ಮಾಡಿದ್ದಕ್ಕಾಗಿ ದಂಡನೆ.**– ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ವಿನಿಯಮನಗಳ ಮೇರೆಗೆ ಅಗತ್ಯಪಡಿಸಲಾದ ಯಾರೇ ವ್ಯಕ್ತಿಯು,–

(ಎ) ಯಾವುದೇ ದಸ್ತಾವೇಜು, ತಃಖ್ತೆ, ಲೆಕ್ಕಪತ್ರ ವಿವರಪಟ್ಟಿಕೆ ಅಥವಾ ವರದಿಯನ್ನು ಪ್ರಾಧಿಕಾರಕ್ಕೆ ಒದಗಿಸಲು ವಿಫಲನಾದರೆ; ಅಥವಾ

(ಬಿ) ಯಾವ ನಿರ್ದೇಶನಗಳನ್ನು ಪಾಲಿಸಬೇಕೋ ಅಂಥ ನಿರ್ದೇಶನಗಳನ್ನು ಪಾಲಿಸಲು ವಿಫಲನಾದರೆ;

(ಸಿ) ಧನಾನುಕೂಲತೆಯು ಯಾವ ಕನಿಷ್ಠ ಮಿತಿಯನ್ನು ಇಟ್ಟುಕೊಂಡು ಬರಬೇಕೋ ಆ ಧನಾನುಕೂಲತೆ ಅಂಥ ಕನಿಷ್ಠ ಮಿತಿಯನ್ನು ಇಟ್ಟುಕೊಂಡು ಬರಲು ವಿಫಲನಾದರೆ;

(ಡಿ) ಯಾವ ವಿಮಾ ಒಪ್ಪಂದಗಳ ಮೇಲಿನ ನಿರ್ದೇಶನಗಳನ್ನು ಪಾಲಿಸಬೇಕೋ ಅಂಥ ವಿಮಾ ಒಪ್ಪಂದಗಳ ಮೇಲಿನ ನಿರ್ದೇಶನಗಳನ್ನು ಪಾಲಿಸಲು ವಿಫಲನಾದರೆ

– ಅವನು ಅಂಥ ಪ್ರತಿಯೊಂದು ವಿಫಲತೆಗೂ ಐದು ಲಕ್ಷ ರೂಪಾಯಿಗಳಿಗೆ ಮೀರದ ದಂಡನೆಗೆ ಗುರಿಯಾಗತಕ್ಕದ್ದು ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**103. 3ನೇ, 7ನೇ ಮತ್ತು 98ನೇ ಪ್ರಕರಣಗಳನ್ನು ಉಲ್ಲಂಘಿಸಿ ವಿಮಾ ವ್ಯವಹಾರವನ್ನು ನಡೆಸುತ್ತಿರುವುದಕ್ಕಾಗಿ ದಂಡನೆ.**– ಒಬ್ಬ ವ್ಯಕ್ತಿಯು, ಸುಳ್ಳಾದ ಮತ್ತು ಅದು ಸುಳ್ಳಾದುದೆಂದು ಅವನಿಗೆ ಗೊತ್ತಿರುವ ಅಥವಾ ನಂಬಿರುವ ಅಥವಾ ಅದು ನಿಜವೆಂದು ನಂಬದಿರುವ ಹೇಳಿಕೆ ನೀಡಿದರೆ ಅಥವಾ ಯಾವುದೇ ದಸ್ತಾವೇಜನ್ನು, ವಿವರ ಪತ್ರವನ್ನು, ಲೆಕ್ಕಪತ್ರವನ್ನು, ವಿವರಣ ಪಟ್ಟಿಕೆಯನ್ನು ಅಥವಾ ವರದಿಯನ್ನು ಒದಗಿಸಿದರೆ,–

(ಎ) ಅವನು ಅಂಥ ಪ್ರತಿಯೊಂದು ತಪ್ಪಿಗೆ ಐದು ಲಕ್ಷ ರೂಪಾಯಿಗಳನ್ನು ಮೀರದ ದಂಡನೆಗೆ ಗುರಿಯಾಗತಕ್ಕದ್ದು; ಮತ್ತು

(ಬಿ) ಅವನು, ಅಂಥ ಪ್ರತಿಯೊಂದು ತಪ್ಪಿಗಾಗಿ ಮೂರು ವರ್ಷಗಳಿಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**104. ದಸ್ತಾವೇಜಿನಲ್ಲಿ ಸುಳ್ಳು ನಿರೂಪಣೆ ಮಾಡಿದ್ದಕ್ಕಾಗಿ ದಂಡನೆ.**– ಯಾರೇ ವ್ಯಕ್ತಿಯು, 27ನೇ ಪ್ರಕರಣದ ಅಥವಾ 27ಎ ಪ್ರಕರಣದ ಅಥವಾ 27ಬಿ ಪ್ರಕರಣದ ಅಥವಾ 27ಸಿ ಪ್ರಕರಣದ ಅಥವಾ 27ಡಿ ಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದರೆ, ಅವನು ಅಂಥ ಪ್ರತಿಯೊಂದು ತಪ್ಪಿಗಾಗಿ ಐದು ಲಕ್ಷ ರೂಪಾಯಿಗಳಿಗೆ ಮೀರದಂಥ ದಂಡನೆಗೆ ಗುರಿಯಾಗತಕ್ಕದ್ದು.

**105. ಸ್ವತ್ತನ್ನು ಅಕ್ರಮವಾಗಿ ಪಡೆಯುವುದು ಅಥವಾ ತಡೆಹಿಡಿಯುವುದು.**– ವಿಮಾಕರ್ತನ ಯಾರೇ ನಿರ್ದೇಶಕ, ವ್ಯವಸ್ಥಾಪಕ ನಿರ್ದೇಶಕ, ವ್ಯವಸ್ಥಾಪಕ ಅಥವಾ ಇತರ ಅಧಿಕಾರಿ ಅಥವಾ ನೌಕರರು ಯಾವುದೇ ಸ್ವತ್ತನ್ನು ಅಕ್ರಮವಾಗಿ ವಶಕ್ಕೆ ಪಡೆದರೆ ಅಥವಾ ಈ ಅಧಿನಿಯಮದ ಯಾವುದೇ ಉದ್ದೇಶಕ್ಕೆ ಅಕ್ರಮವಾಗಿ ವಿನಿಯೋಗಿಸಿದರೆ, ಅವನು ಅಂಥ ಪ್ರತಿಯೊಂದು ತಪ್ಪಿಗೆ ಎರಡು ಲಕ್ಷ ರೂಪಾಯಿಗಳಿಗೆ ಮೀರದ ದಂಡನೆಗೆ ಗುರಿಯಾಗತಕ್ಕದ್ದು.

**105ಎ. ಕಂಪನಿಗಳಿಂದ ಅಪರಾಧಗಳು.**– (1) ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಆ ಅಪರಾಧ ಮಾಡಿದ ಸಮಯದಲ್ಲಿ ಕಂಪನಿಯ ವ್ಯವಹಾರದ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರದ ಬಗ್ಗೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಇರುವುದು ಯಾವುದೂ, ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ತಡೆಯಲು ತಾನು ಯಥೋಚಿತವಾದ ಎಲ್ಲ ಎಚ್ಚರಿಕೆ ವಹಿಸಿದ್ದೆನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಅವನನ್ನು ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗೆ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾರೇ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವರ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ಆರೋಪಿಸಿರುವುದು ರುಜುವಾತಾದರೆ, ಅಂಥ ನಿರ್ದೇಶಕನನ್ನು, ವ್ಯವಸ್ಥಾಪಕನನ್ನು, ಕಾರ್ಯದರ್ಶಿಯನ್ನು, ಅಥವಾ ಇತರ ಅಧಿಕಾರಿಯನ್ನು ಸಹ ಆ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ತದನುಸಾರವಾಗಿ ದಂಡಿತರಾಗತಕ್ಕದ್ದು.

**ವಿವರಣೆ.**– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಎಂದು ಅರ್ಥ ಮತ್ತು ಅದು,–

(i) ಒಂದು ಫರ್ಮ್‌ನ್ನು; ಮತ್ತು

(ii) ನಿಗಮಿತವಾಗಿರಲಿ ಅಥವಾ ಆಗಿಲ್ಲದಿರಲಿ ವ್ಯಕ್ತಿಗಳ ಸಂಘವನ್ನು ಅಥವಾ ವ್ಯಕ್ತಿಗಳ ನಿಕಾಯವನ್ನು

– ಒಳಗೊಳ್ಳುತ್ತದೆ; ಮತ್ತು

(ಬಿ) (i) "ನಿರ್ದೇಶಕ" ಎಂದರೆ (i) ಫರ್ಮಿಗೆ ಸಂಬಂಧಿಸಿದಂತೆ ಫರ್ಮಿನ ಒಬ್ಬ ಪಾಲುದಾರ ಎಂದು ಅರ್ಥ;

(ii) ವ್ಯಕ್ತಿಗಳ ಸಂಘಕ್ಕೆ ಅಥವಾ ವ್ಯಕ್ತಿಗಳ ನಿಕಾಯಕ್ಕೆ ಸಂಬಂಧಿಸಿದಂತೆ, ಅದರ ವ್ಯವಹಾರವನ್ನು ನಿಯಂತ್ರಿಸುತ್ತಿರುವ ಯಾರೇ ಸದಸ್ಯ ಎಂದು ಅರ್ಥ.

**105ಬಿ. 32ಬಿ ಪ್ರಕರಣವನ್ನು ಪಾಲಿಸಲು ವಿಫಲವಾದುದಕ್ಕೆ ದಂಡನೆ.–** ವಿಮಾಕರ್ತನು 32ಬಿ ಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದರೆ, ಅವನು ಅಂಥ ಪ್ರತಿಯೊಂದು ತಪ್ಪಿಗಾಗಿ ಐದು ಲಕ್ಷ ರೂಪಾಯಿಗಳನ್ನು ಮೀರದಂತೆ ದಂಡನೆಗೆ ಗುರಿಯಾಗತಕ್ಕದ್ದು ಮತ್ತು ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರವಾಸದಿಂದ ಅಥವಾ ಅಂಥ ಪ್ರತಿಯೊಂದು ತಪ್ಪಿಗೂ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**105ಸಿ. 32ಸಿ ಪ್ರಕರಣವನ್ನು ಪಾಲಿಸಲು ವಿಫಲವಾದುದಕ್ಕೆ ದಂಡನೆ.–** ವಿಮಾಕರ್ತನು 32ಸಿ ಪ್ರಕರಣದ ಉಪಬಂಧಗಳನ್ನು ಪಾಲಿಸಲು ತಪ್ಪಿದರೆ, ಅವನು ಅಂಥ ಪ್ರತಿಯೊಂದು ವಿಫಲತೆಗಾಗಿ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಮೀರದ ದಂಡನೆಗೆ ಗುರಿಯಾಗತಕ್ಕದ್ದು ಮತ್ತು ತರುವಾಯದ ಮತ್ತು ಮುಂದುವರೆದ ತಪ್ಪಿನ ಸಂದರ್ಭದಲ್ಲಿ, 3ನೇ ಪ್ರಕರಣದ ಮೇರೆಗೆ ಅಂಥ ವಿಮಾಕರ್ತನಿಗೆ ಮಂಜೂರಾದ ನೋಂದಣಿಯನ್ನು ಪ್ರಾಧಿಕಾರವು ರದ್ದುಪಡಿಸತಕ್ಕದ್ದು.".

43. 110ಎ, 110ಬಿ ಮತ್ತು 110ಸಿ ಪ್ರಕರಣಗಳಲ್ಲಿ "ನಿಯಂತ್ರಕ" ಎಂಬುದಕ್ಕೆ ಬದಲಾಗಿ ಅದು ಬರುವ ಕಡೆಯಲ್ಲೆಲ್ಲಾ "ಪ್ರಾಧಿಕಾರದ ಅಧ್ಯಕ್ಷ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

44. 110ಜಿ ಪ್ರಕರಣದಲ್ಲಿ, "ನಿಯಂತ್ರಕ" ಎಂಬುದಕ್ಕೆ ಬದಲಾಗಿ ಅದು ಬರುವ ಎರಡೂ ಕಡೆಗಳಲ್ಲಿ "ಪ್ರಾಧಿಕಾರದ ಅಧ್ಯಕ್ಷ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

45. 110ಹೆಚ್ ಪ್ರಕರಣದ (1)ನೇ ಉಪಪ್ರಕರಣದಲ್ಲಿ, "ಪ್ರಕರಣಗಳ ಮೇರೆಗೆ" ಎಂಬುದಕ್ಕೆ ಬದಲಾಗಿ "27ಡಿ ಪ್ರಕರಣಗಳ ಮೇರೆಗೆ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

46. 114ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ,–

(ಎ) (ಎ) ಖಂಡದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು.–

"(ಎಎ) ಸಂದಾಯಿತ ಈಕ್ವಿಟಿ ಬಂಡವಾಳದ ಇತರ ಅಂಥ ಶೇಕಡಾ ಪ್ರಮಾಣವು, ಸಂದಾಯಿತ ಈಕ್ವಿಟಿ ಬಂಡವಾಳದ ಶೇಕಡಾ ಇಪ್ಪತ್ತಾರಕ್ಕಿಂತ ಅಧಿಕವಿದ್ದಲ್ಲಿ ಮತ್ತು ಅಂಥ ಅಧಿಕ ಸಂದಾಯಿತ ಈಕ್ವಿಟಿ ಬಂಡವಾಳವನ್ನು 6ಎಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಯಾವ ಅವಧಿಯಲ್ಲಿ ಬಿಟ್ಟುಬಿಡಬೇಕೋ ಆ ಅವಧಿ.";

(ಬಿ) (ಜಿ) ಮತ್ತು (ಎಲ್ಎಲ್) ಖಂಡಗಳನ್ನು ಬಿಟ್ಟುಬಿಡತಕ್ಕದ್ದು.

47. 114ನೇ ಪ್ರಕರಣದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು.–

**"114ಎ. ವಿನಿಯಮನಗಳನ್ನು ರಚಿಸಲು ಪ್ರಾಧಿಕಾರದ ಅಧಿಕಾರ.–** (1) ಪ್ರಾಧಿಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತ ಗೊಳಿಸುವುದಕ್ಕಾಗಿ ಈ ಅಧಿನಿಯಮಕ್ಕೆ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳಿಗೆ ಸುಸಂಗತವಾಗಿರುವ ವಿನಿಯಮನಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ವಿನಿಯಮನಗಳು ಈ ಕೆಳಕಂಡ ಎಲ್ಲಾ ವಿಷಯಗಳಿಗೆ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧಿಸಬಹುದು, ಎಂದರೆ:–

(ಎ) 3ನೇ ಪ್ರಕರಣದ ಮೇರೆಗೆ ವಿಮಾಕರ್ತರ ನೋಂದಣಿಗೆ ಸಂಬಂಧಿಸಿದ ಶುಲ್ಕವೂ ಸೇರಿದಂತೆ ಇತರ ವಿಷಯಗಳು;

(ಬಿ) 3ನೇ ಪ್ರಕರಣದ (5ಇ) ಉಪಪ್ರಕರಣದ ಮೇರೆಗೆ ನೋಂದಣಿಯನ್ನು ಅಮಾನತು ಮಾಡುವ ಅಥವಾ ರದ್ದುಪಡಿಸುವ ರೀತಿ;

(ಸಿ) 3ನೇ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ನೋಂದಣಿಯ ದ್ವಿಪ್ರತಿ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ವಿನಿಯಮನಗಳ ಮೂಲಕ ನಿರ್ಧರಿಸಬಹುದಾದಂಥ ಐದು ಸಾವಿರ ರೂಪಾಯಿಗಳನ್ನು ಮೀರದಂಥ ಶುಲ್ಕ;

(ಡಿ) 3ಎ ಪ್ರಕರಣದ ಮೇರೆಗೆ ನೋಂದಣಿಯ ನವೀಕರಣಕ್ಕೆ ಸಂಬಂಧಿಸಿದ ವಿಷಯಗಳು ಮತ್ತು ಅದಕ್ಕಾಗಿ ಶುಲ್ಕ;

(ಇ) 6ಎಎ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಧಿಕ ಷೇರು ಬಂಡವಾಳವನ್ನು ತೊರೆಯುವ ರೀತಿ ಮತ್ತು ಪ್ರಕ್ರಿಯೆ;

(ಎಫ್)11ನೇ ಪ್ರಕರಣದ (1ಎ) ಉಪಪ್ರಕರಣದ ಮೇರೆಗೆ ಜಮಾ ಖರ್ಚು ಪಟ್ಟಿಯನ್ನು, ಲಾಭ ಮತ್ತು ನಷ್ಟದ ಲೆಕ್ಕಪತ್ರವನ್ನು ಮತ್ತು ಸ್ವೀಕೃತಿಗಳ ಮತ್ತು ಸಂದಾಯಗಳ ಪ್ರತ್ಯೇಕ ಲೆಕ್ಕಪತ್ರವನ್ನು ಮತ್ತು ರಾಜಸ್ವ ಲೆಕ್ಕಪತ್ರವನ್ನು ತಯಾರಿಸುವುದು;

(ಜಿ) 13ನೇ ಪ್ರಕರಣದ (1)ನೇ ಉಪಪ್ರಕರಣದ ನಾಲ್ಕನೆಯ ಪರಂತುಕದ ಮೇರೆಗೆ ನಿರ್ದಿಷ್ಟಪಡಿಸಬೇಕಾದ ವಿಮಾ ಗಣಕ ವರದಿಯ ಸಾರಾಂಶವು ಯಾವ ರೀತಿಯಲ್ಲಿರಬೇಕೋ ಆ ರೀತಿ;

(ಹೆಚ್) 13ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ತಃಖ್ತೆಗೆ ಯಾವ ನಮೂನೆಯನ್ನು ಲಗತ್ತಿಸಬೇಕೋ ಮತ್ತು ಅದು ಯಾವ ರೀತಿಯಲ್ಲಿರಬೇಕೋ ಆ ನಮೂನೆ ಮತ್ತು ರೀತಿ;

(ಐ) 27ಡಿ ಪ್ರಕರಣದ (1)ನೇ, (2)ನೇ ಮತ್ತು (3)ನೇ ಉಪಪ್ರಕರಣಗಳ ಮೇರೆಗೆ ಒಬ್ಬ ವಿಮಾಕರ್ತನು ಹೊಂದಿರುವ ಆಸ್ತಿಗಳನ್ನು ತೊಡಗಿಸುವುದಕ್ಕೆ ಸಂಬಂಧಿಸಿದ ಕಾಲ, ರೀತಿ ಮತ್ತು ಇತರ ಷರತ್ತುಗಳು;

(ಜೆ) ವಿಮಾಕರ್ತನು ತನ್ನ ಪುಸ್ತಕಗಳಲ್ಲಿ ನಿರ್ವಹಿಸಬೇಕಾದ ಕನಿಷ್ಠ ಮಾಹಿತಿ, ಯಾವ ರೀತಿಯಲ್ಲಿ ಅಂಥ ಮಾಹಿತಿಯನ್ನು ನಿರ್ವಹಿಸತಕ್ಕದ್ದೋ ಆ ರೀತಿ, ಆ ಸಂಬಂಧದಲ್ಲಿ ವಿಮಾಕರ್ತರು ಅಳವಡಿಸಿಕೊಳ್ಳಬೇಕಾದ ಪರೀಕ್ಷೆಗಳು ಮತ್ತು ಇತರ ಸತ್ಯಾಪನೆಗಳು ಮತ್ತು 33ನೇ ಪ್ರಕರಣದ (8)ನೇ ಉಪಪ್ರಕರಣದ ಮೇರೆಗೆ ಅದಕ್ಕೆ ಆನುಷಂಗಿಕವಾದ ಎಲ್ಲ ಇತರ ವಿಷಯಗಳು;

(ಕೆ) 42ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ವಿಮಾ ಏಜೆಂಟನಾಗಿ ಕಾರ್ಯನಿರ್ವಹಿಸಲು ಅರ್ಜಿ ಸಲ್ಲಿಸುವ ರೀತಿ, ಲೈಸೆನ್ಸ್ ನೀಡುವ ರೀತಿ ಮತ್ತು ಶುಲ್ಕ;

(ಎಲ್)42ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ವಿಮಾ ಏಜೆಂಟ್‌ನ ಲೈಸೆನ್ಸ್ ನವೀಕರಣಕ್ಕಾಗಿ ನಿರ್ಧರಿಸಬೇಕಾದ ಶುಲ್ಕ ಮತ್ತು ಹೆಚ್ಚಿನ ಶುಲ್ಕ;

(ಎಂ) 42ನೇ ಪ್ರಕರಣದ (4)ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ಒಬ್ಬ ವಿಮಾ ಏಜೆಂಟನಾಗಿ ಕಾರ್ಯನಿರ್ವಹಿಸಲು ಇರಬೇಕಾದ ಅಗತ್ಯ ಅರ್ಹತೆಗಳು ಮತ್ತು ಪ್ರಾಯೋಗಿಕ ತರಬೇತಿ;

(ಎನ್) 42ನೇ ಪ್ರಕರಣದ (4)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ವಿಮಾ ಏಜೆಂಟನಾಗಿ ಕಾರ್ಯನಿರ್ವಹಿಸಲು ತೇರ್ಗಡೆಯಾಗಬೇಕಾದ ಪರೀಕ್ಷೆ;

(ಒ) 42ನೇ ಪ್ರಕರಣದ (4)ನೇ ಉಪಪ್ರಕರಣದ (ಜಿ) ಖಂಡದ ಮೇರೆಗಿನ ನೀತಿ ಸಂಹಿತೆ;

(ಪಿ) 42ನೇ ಪ್ರಕರಣದ (6)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸಿನ ದ್ವಿಪ್ರತಿಯನ್ನು ನೀಡುವುದಕ್ಕಾಗಿ ಐವತ್ತು ರೂಪಾಯಿಗಳನ್ನು ಮೀರದಂಥ ಶುಲ್ಕ;

(ಕ್ಯೂ) 42ಡಿ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಮಧ್ಯವರ್ತಿಗೆ ಅಥವಾ ವಿಮಾ ಮಧ್ಯವರ್ತಿಗೆ ಲೈಸೆನ್ಸ್ ನೀಡುವ ರೀತಿ ಮತ್ತು ಶುಲ್ಕ;

(ಆರ್) 42ಡಿ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಮಧ್ಯವರ್ತಿಗಳ ಅಥವಾ ವಿಮಾ ಮಧ್ಯವರ್ತಿಗಳ ಲೈಸೆನ್ಸಿನ ನವೀಕರಣಕ್ಕಾಗಿ ನಿರ್ಧರಿಸಬೇಕಾದ ಶುಲ್ಕ ಮತ್ತು ಹೆಚ್ಚಿನ ಶುಲ್ಕ;

(ಎಸ್) 42ಡಿ ಪ್ರಕರಣದ (5)ನೇ ಉಪಪ್ರಕರಣದ (ಇ) ಖಂಡದ ಮೇರೆಗೆ ಮಧ್ಯವರ್ತಿಗಳ ಅಥವಾ ವಿಮಾ ಮಧ್ಯವರ್ತಿಗಳ ಅಗತ್ಯ ಅರ್ಹತೆಗಳು ಮತ್ತು ಪ್ರಾಯೋಗಿಕ ತರಬೇತಿ;

(ಟಿ) 42ಡಿ ಪ್ರಕರಣದ (5)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ಮಧ್ಯವರ್ತಿಯಾಗಿ ಅಥವಾ ವಿಮಾ ಮಧ್ಯವರ್ತಿಯಾಗಿ ಕಾರ್ಯನಿರ್ವಹಿಸಲು ತೇರ್ಗಡೆ ಯಾಗಬೇಕಾದ ಪರೀಕ್ಷೆ;

(ಯು) 42ಡಿ ಪ್ರಕರಣದ (5)ನೇ ಉಪಪ್ರಕರಣದ (ಜಿ) ಖಂಡದ ಮೇರೆಗೆ ನೀತಿ ಸಂಹಿತೆ;

(ವಿ) 42ಡಿ ಪ್ರಕರಣದ (7)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸಿನ ದ್ವಿಪ್ರತಿಯನ್ನು ನೀಡಲು ಶುಲ್ಕ;

(ಡಬ್ಲ್ಯು) ಟ್ಯಾರಿಫ್ ಸಲಹಾ ಸಮಿತಿಗೆ ಸಂಬಂಧಿಸಿದಂತೆ 64ಯುಬಿ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದಂಥ ವಿಷಯಗಳು;

(ಎಕ್ಸ್) ಸರ್ವೇಯರುಗಳ ಮತ್ತು ನಷ್ಟ ನಿರ್ಧಾರಕರುಗಳ ಲೈಸೆನ್ಸ್ ನೀಡಿಕೆಗೆ ಸಂಬಂಧಿಸಿದ ವಿಷಯಗಳು, 64ಯುಎಂ ಪ್ರಕರಣದ ಮೇರೆಗೆ ಅವರ ಕರ್ತವ್ಯಗಳು, ಜವಾಬ್ದಾರಿಗಳು ಮತ್ತು ಅಗತ್ಯಪಡಿಸಿದ ಇತರ ವೃತ್ತೀಯ ಅಗತ್ಯತೆಗಳು;

(ವೈ) 64ವಿಎ ಪ್ರಕರಣದ ಮೇರೆಗೆ ಆಸ್ತಿಗಳು ಸಾಕಷ್ಟಿವೆಯೋ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ 64ವಿ ಪ್ರಕರಣದ (1)ನೇ ಉಪಪ್ರಕರಣದ (ಹೆಚ್) ಖಂಡದ ಮೇರೆಗೆ ನಿರ್ದಿಷ್ಟಪಡಿಸಬಹುದಾದಂಥ ಇತರ ಆಸ್ತಿ ಅಥವಾ ಆಸ್ತಿಗಳು;

(ಜಡ್)64ವಿ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಆಸ್ತಿಗಳ ಮತ್ತು ಹೊಣೆಗಳ ಮೌಲ್ಯ ನಿರ್ಣಯ;

(ಜಡ್ಎ) ಆಸ್ತಿಗಳ ಪರ್ಯಾಪ್ತತೆಗೆ ಸಂಬಂಧಿಸಿದಂತೆ 64ವಿಎ ಪ್ರಕರಣದ (1ಎ) ಉಪ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ವಿಷಯಗಳು;

(ಜಡ್‌ಬಿ) 101ಎ ಮತ್ತು 101ಬಿ ಪ್ರಕರಣಗಳ ಮೇರೆಗೆ ಮರು ವಿಮೆಗೆ ಸಂಬಂಧಿಸಿದ ವಿಷಯಗಳು;

(ಜಡ್‌ಸಿ) ವಿಮಾಧಾರಕರ ಹಿತಾಸಕ್ತಿಯನ್ನು ರಕ್ಷಿಸುವ ದೃಷ್ಟಿಯಿಂದ ಅವರ ತೊಂದರೆಗಳನ್ನು ನಿವಾರಿಸುವುದಕ್ಕೆ ಮತ್ತು ವಿಮಾ ಉದ್ಯಮವನ್ನು ನಿಯಂತ್ರಿಸುವುದಕ್ಕೆ, ವೃದ್ಧಿಪಡಿಸುವುದಕ್ಕೆ ಮತ್ತು ಕ್ರಮಬದ್ಧ ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳುವುದಕ್ಕೆ ಸಂಬಂಧಿಸಿದ ವಿಷಯಗಳು; ಮತ್ತು

(ಜಡ್‌ಡಿ) ಯಾವ ಇತರ ವಿಷಯವನ್ನು ಪ್ರಾಧಿಕಾರವು ರಚಿಸಿದ ವಿನಿಯಮನಗಳ ಮೂಲಕ ನಿರ್ದಿಷ್ಟಪಡಿಸಬೇಕೋ ಅಥವಾ ನಿರ್ದಿಷ್ಟಪಡಿಸಬಹುದೋ ಅಥವಾ ಅದಕ್ಕೆ ಸಂಬಂಧಿಸಿದಂತೆ ವಿನಿಯಮನಗಳ ಮೂಲಕ ಉಪಬಂಧ ಕಲ್ಪಿಸಬೇಕೋ ಅಥವಾ ಕಲ್ಪಿಸಬಹುದೋ ಆ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ವಿನಿಯಮನವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು, ಮತ್ತು ಹಿಂದೆ ಹೇಳಿದ ಅಧಿವೇಶನಕ್ಕೆ ಅಥವಾ ಒಂದಾದ ಮೇಲೊಂದರಂತೆ ಅನುಕ್ರಮವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ವಿನಿಯಮನದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ವಿನಿಯಮನವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ವಿನಿಯಮನವು ಆ ತರುವಾಯ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ

ರದ್ದಿಯಾತಿಯು, ಆ ವಿನಿಯಮನದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟು ಮಾಡತಕ್ಕದ್ದಲ್ಲ.".

48. 116ಎ ಪ್ರಕರಣದಲ್ಲಿ "ಕೇಂದ್ರ ಸರ್ಕಾರ" ಎಂಬುದಕ್ಕೆ ಬದಲಾಗಿ ಅದು ಬರುವ ಎರಡೂ ಕಡೆಗಳಲ್ಲಿ, "ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದ ದಿನಾಂಕಕ್ಕೆ ಮುಂಚೆ ಕೇಂದ್ರ ಸರ್ಕಾರ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

**ಎರಡನೆಯ ಅನುಸೂಚಿ**
**(31ನೇ ಪ್ರಕರಣ ನೋಡಿ)**

**ಜೀವ ವಿಮಾ ನಿಗಮ ಅಧಿನಿಯಮ, 1956ಕ್ಕೆ ತಿದ್ದುಪಡಿ**
**(1956ರ 31)**

1. ಈ ಅಧಿನಿಯಮದಲ್ಲಿ, "ನಿಯಂತ್ರಕ" ಎಂಬುದಕ್ಕೆ ಬದಲಾಗಿ ಅದು ಬರುವ ಕಡೆಯಲ್ಲೆಲ್ಲಾ "ಪ್ರಾಧಿಕಾರ" ಎಂಬುದನ್ನು ಪ್ರತ್ಯಾಯೋಜಿಸತಕ್ಕದ್ದು.

2. 30ನೇ ಪ್ರಕರಣದ ನಂತರ ಈ ಮುಂದಿನದನ್ನು ಸೇರಿಸತಕ್ಕದ್ದು:–

**"30ಎ. ನಿಗಮಕ್ಕೆ ಮಾತ್ರವೇ ಇರುವ ವಿಶೇಷ ಅಧಿಕಾರವು ನಿಂತುಹೋಗುವುದು.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಭಾರತದಲ್ಲಿ ಜೀವ ವಿಮಾ ವ್ಯವಹಾರವನ್ನು ನಡೆಸಲು ನಿಗಮಕ್ಕೆ ಮಾತ್ರವೇ ಇರುವ ವಿಶೇಷಾಧಿಕಾರವು ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದಂದು ಅಥವಾ ಅಂದಿನಿಂದ ನಿಂತುಹೋಗತಕ್ಕದ್ದು ಮತ್ತು ನಿಗಮವು ಆನಂತರ ಭಾರತದಲ್ಲಿ ಜೀವ ವಿಮಾ ವ್ಯವಹಾರವನ್ನು ವಿಮಾ ಅಧಿನಿಯಮ, 1938ರ ಉಪಬಂಧಗಳಿಗನುಸಾರವಾಗಿ ನಡೆಸತಕ್ಕದ್ದು.".

**ಮೂರನೆಯ ಅನುಸೂಚಿ**
**(32ನೇ ಪ್ರಕರಣ ನೋಡಿ)**

**ಸಾಮಾನ್ಯ ವಿಮಾ ವ್ಯವಹಾರದ (ರಾಷ್ಟ್ರೀಕರಣ) ಅಧಿನಿಯಮ, 1972ಕ್ಕೆ ತಿದ್ದುಪಡಿ**
**(1972ರ 57)**

24ನೇ ಪ್ರಕರಣದ ನಂತರ, ಈ ಮುಂದಿನದನ್ನು ಸೇರಿಸತಕ್ಕದ್ದು:–

**"24ಎ. ನಿಗಮಕ್ಕೆ ಮತ್ತು ಆರ್ಜಿಸುವ ಕಂಪನಿಗಳಿಗೆ ಮಾತ್ರವೇ ಇರುವ ವಿಶೇಷ ಅಧಿಕಾರವು ನಿಂತುಹೋಗುವುದು.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಭಾರತದಲ್ಲಿ ಸಾಮಾನ್ಯ ವಿಮಾ ವ್ಯವಹಾರವನ್ನು ನಡೆಸಲು ನಿಗಮಕ್ಕೆ ಮತ್ತು ಆರ್ಜಿಸುವ ಕಂಪನಿಗಳಿಗೆ ಮಾತ್ರವೇ ಇರುವ ವಿಶೇಷಾಧಿಕಾರವು ವಿಮಾ ವಿನಿಯಾಮಕ ಮತ್ತು ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1999ರ ಪ್ರಾರಂಭದಂದು ಮತ್ತು ಅಂದಿನಿಂದ ನಿಂತುಹೋಗತಕ್ಕದ್ದು ಮತ್ತು ನಿಗಮವು ಮತ್ತು ಆರ್ಜಿಸುವ ಕಂಪನಿಗಳು ಆನಂತರ ಭಾರತದಲ್ಲಿ ಸಾಮಾನ್ಯ ವಿಮಾ ವ್ಯವಹಾರವನ್ನು ವಿಮಾ ಅಧಿನಿಯಮ, 1938ರ ಉಪಬಂಧಗಳಿಗನುಸಾರವಾಗಿ ನಡೆಸತಕ್ಕದ್ದು.".

ವಿ.ಕೆ. ಭಸೀನ್
ಕಾರ್ಯದರ್ಶಿ
ಭಾರತ ಸರ್ಕಾರ

* * * * *

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. ಕಾ.ಸೂ. ಪಿ. 31 - 100 ಪ್ರತಿಗಳು - ಪಿ3